House of Commons in England. He knows very well that that practice has developed as a result of agreement between parties and that it is a matter with which the Chair is not directly concerned. I would, therefore, suggest to the Leader of the Opposition that this is a matter which he should take up with the Leader of the House and if an agreed formula were to be evolved, as pointed out by the Leader of the House, the Chair will certainly implement it. I may also mention that in the Parliament of India and in other Legislatures in India, the practice at present is more or less the same as obtains here. But if the members reach agreement and convey the same to me, I shall certainly implement the same. This will indeed be a graceful and healthy convention.

Sri J. MOHAMED IMAM.—Sir, we have pointed out in all good faith what should be the democratic set up. The Leader of the House, in spite of his high sounding words, has suggested a certain method—mutual talk and agreement—and you have also been pleased to suggest the same. In view of all this, it is left to the Leader of the House. Whether he confers concessions or not, is immaterial. We are concerned about establishing healthy conventions. We will watch what action he will take and what will be his attitude...

Sri K. HANUMANTHAIYA.– Sir, he cannot say that he will watch what action we will take. It is a very unhelpful attitude he adopts. It is hardly the way, as he himself said, for establishing good traditions.

Demands for Grant—Scientific Departments.

Mr. SPEAKER.—After my remarks, it was not necessary for the Leader of the Opposition to make these observations.

Sri J. MOHAMED IMAM.—We will participate in the discussions.

BUDGET FOR 1953-54
DEMANDS FOR GRANTS
DEMAND No. 17

Scientific Departments.

36. *Scientific Departments.*

Mr. SPEAKER.—Motion moved :

"That a sum not exceeding Rs. 6,29,000 be granted to the Government to defray the charges which will come in course of payment during the year ending 31st day of March 1954, in respect of 'Scientific Departments'."

Sri A. G. RAMACHANDRA RAO (Minister for Law and Education).—There are three departments coming under this Head. Regarding the Geological Department, a few cut motions have been tabled. I may be permitted to make a short statement regarding the Geological Department. I may be allowed to make it now or after cut motions one and two are moved.

ಈ ಭಾಗದಲ್ಲಿ ಎರಡು ಮೂರು ಬಾಬುಗಳಿಗೆ ಸಂಬಂಧಪಟ್ಟ ಖೋತಾ ಸೂಚನೆಗಳಿವೆ. ಇವುಗಳ ಪೈಕಿ ಜಿಯಲಾಜಿಕಲ್ ಇಲಾಖೆಗೆ ಸಂಬಂಧಪಟ್ಟ ಸೂಚನೆ ಒಂದಿದೆ. ಆದರಿಂದ ಈ ಇಲಾಖೆ ಎಷ್ಟು ಮಟ್ಟಿಗೆ ಮುಂದುವರಿದಿದೆಯೆಂಬುದನ್ನು ಹೇಳಬೇಕಾಗಿದೆ. ಇದನ್ನು ಈಗಲಾದರೂ ಹೇಳಬಹುದು, ಆ ಮೇಲೆ ಮೊದಲನೆಯ ಎರಡು ಸೂಚನೆಗಳ ಚರ್ಚೆಯಾದ ಮೇಲೆ ಬೇಕಾದರೂ ಹೇಳಬಹುದು. ಅಧ್ಯಕ್ಷರು ಹೇಗೆ ಹೇಳಿದರೆ ಹಾಗೆ ಮಾಡುತ್ತೇನೆ.

Mr. SPEAKER.—It would be better to make the statement at the very outset.

Sri M. LINGANNA.—Sir, I think, it will be quite convenient if the Hon'ble Minister were to answer at the end, *i.e.*, by way of reply to all the cut motions.

Mr. SPEAKER.—This practice, I have already enunciated the other day. It is left to the Minister to make a statement or not.

Sri A. G. RAMACHANDRA RAO.—I shall be answering the cut motions as well. But to give a comprehensive view of the department's working, it is better that a short

(SRI A. G. RAMACHANDRA RAO.)

statement is made. The Mysore Geological Department is one of the oldest scientific organisations in the Mysore State. In addition to the geological and mineral surveys conducted by the Department, which has been recognised all over India and abroad, the Department has been administering the grant of mineral concessions to the public in the State.

The following comprise the main items of work of the Department at present :—

(1) Geological survey of selected areas in the State;
(2) Mineral survey and prospecting;
(3) Working of the Bureau of Mineral Development and Bellara Gold Mines;
(4) Problems relating to the Engineering and Water supply;
(5) Economic utility of minerals.

The work of the Department in all spheres of activity is progressing day by day and continues to be satisfactory. The grant of mineral concessions to the public is on the increase, as detailed hereunder, the figures representing the concessions granted, especially for manganese ore for which there is, at present, a good demand from foreign countries:

A comparative statement of mineral concessions granted during 1947-48 to 1952-53 :—

1947-48	*1948-49*	*1949-50*
354	438	420
1950-51	*1951-52*	*1952-53*
601	670	800

There was also increased activity in licencing quarries of building stones near Bangalore and Kolar Gold Field and revenue of nearly Rs. 40,000 was realised under this item. The revenue of the Department has also increased by the sale of minerals to the public, by way of royalty, by way of rent and cesses on mining lands, by the sale of technical publications, etc.

The Bureau of Mineral Development, which has been started with a budget grant of Rs. 1 lakh, has already realised a sum of Rs. 1,60,000 by way of sale of minerals and another sum of Rs. 40,000 is still to be recovered from the several Industrial concerns for the supplies made to them during the year 1952-53. The activities of the Bellara Gold Mines are also satisfactory.

The demand under the head "36. Scientific Departments" for Rs. 6,29,000 is in respect of different Departments, out of which a sum of Rs. 4,44,600 only is allotted to the Geological Department. The anticipated revenue for the year 1953-54 is Rs. 5,06,000.

A sum of Rs. 3,98,776 was realised out of a total budget estimate of Rs. 3,63,509 for the year 1952-53, the major portion of revenue being derived out of royalty on other minerals and by the sale of minerals through the agency of the Bureau of Mineral Development.

Statement showing the actual Revenue and Expenditure for the last five years :—

Year	*Revenue*	*Expenditure*	
1948-49	1,04,103	1,17,886	(Actuals)
1949-50	2,51,295	1,03,586	"
1950-51	1,39,787	1,04,492	"
1951-52	2,57,816	1,28,336	"
1952-53	3,98,776	3,35,400	(Revised Estimate).

(*up to 20th March* 1953)

1953-54	5,06,000 (*Estimate*).	4,44,600	(Estimate)

Thus, the Department is progressing and has secured All-India recognition for its work and I hope the members will consider this statement while discussing about the department.

PRESERVATION OF STONE EDICTS.

Sri M. LINGANNA (Nanjangud).—Sir, I beg to move:

"That the demand under the head '36. Scientific Departments' for Rs. 6,29,000 be reduced by

Rs. 100 (to urge the Government to safeguard the stone edicts that are found in several villages of the State)."

Sir, the main object with which I am moving this cut motion is to bring home to the Minister concerned the fact that several stone edicts that are found in several villages are so important and they deal with certain historical factors and all such edicts are thrown in open air. Before that, I want to bring to the notice of the House one factor, that almost all these stone edicts have been surveyed by one Mr. B. Lewis Rice, C. I. E., who was the Archæological Director of Mysore. He has taken a lot of pains to publish many volumes containing facsimiles of many stone edicts. I may be permitted to state that with regard to Mysore District itself he has published an edition in 1894. In this particular volume, at the time when he surveyed the whole of Mysore District, it comprises even Mandya District also. He has found in the whole of Mysore District some stone edicts to the tune of nearly 803 and all these stone inscriptions that he found, he was able to reduce them into a volume by way of facsimile. These 803 inscriptions are so important for the following reasons. As we all know, the whole of Kannada State was ruled till now by five dynasties. The first dynasty is Ganga, the second is Chola, the third is that of Hoysala, the fourth is Vijayanagar and the last is that of Mysore. Now, out of all these inscriptions, nearly 61 stone inscriptions deal with Gangas of Talakad, and we know the period that the Ganga dynasty occupied, *i.e.*, between 803 and 1023. Thirty stones deal with Chola dynasty, 220 deal with Hoysala dynasty and 167 deal with Vijayanagar and 92 with that of Mysore. Sir, out of these inscriptions, I will, with your kind permission, bring to the notice of the Hon'ble Minister, nearly 60 stone edicts are found in Mysore Taluk, 158 are found in Srirangapatna, 123 in Mandya, 122 in Malavalli, 140 in T.-Narsipur and 199 in Nanjangud taluk. Sir, it may be stated by way of argument by the concerned Hon'ble Minister that as all these stone edicts have been published in the form of books where is the need to protect again. But, I will bring to the notice of the Hon'ble Minister the state of affairs so far as these stones are concerned. One stone, the number of which found is 110, is found in Nanjangud taluk in a village called Kundlapura, Kowlande Hobli. This stone deals with the date of one of the dynasties, that is, the first dynasty, the Ganga dynasty. This stone is found in one 'Ramadevarahola', in the Southern portion of it. One other stone was found by Mr. Rice himself and he has given the description there, *i.e.*, stone No. 1, of T.-Narsipur. It was found lying all along by the side of taluk kucheri of Talkad and when the taluk office was auctioned, one Brahmin purchased it and when he purchased this taluk office, he removed this stone to the backyard of his House and wanted to make use of this stone for his building purpose. But, when he found some Kannada inscription on that he did not destroy and fortunately this stone was restored by Rice and it has been taken over by the Archæological Department. In this way, several stone edicts which deal with several aspects of the ruling Kannada dynasties in the State are to be found. I would like to bring to the notice of the Hon'ble Minister that not only there are certain inscriptions but also certain stones which deal with what are called certain heroic acts of the villagers, for which ample remuneration or ample rewards have been given by certain Rulers; 'Viragal' and 'Mastigal' they are called. Even these stones are left by and large unprotected. We know that one stone or the other is found either besides a well, or is found on some river side or some other stone is found in some field. Though all these stones are edicted, their facsimiles are edicted in volume, the actual stones, the real stones which give us certain historic information are kept open

(SRI M. LINGANNA.)

and they, in course of time, will dilapidate and they would be reduced to mud by the process of denudation. Stone is converted into mud and water in course of time. What I am pressing is, that these stones may be well kept by easy methods. No amount need be spent for this because we know there is the big Revenue Department, we know there are village officers, the Shanbhogues and Patels and also the Revenue Officers and added to that the Minister concerned can take the help of the Adult Literacy Council also. Whenever I found certain stones, I have requested the village officer concerned to take the co-operation of the villagers and to keep them in proper condition. At least they can be removed to the 'Chavadies' of each village and kept there safely at least temporarily. The village officers may be instructed by the authorities concerned to preserve them safe. The Minister can take the help of his co-Minister, the Hon'ble Revenue Minister and I believe there will be co-operation and he may have no objection whatsoever. If necessary, the Village Offices Act may be so amended so that these duties may be added on to them in this respect. Even the Village Panchayets Act may be amended to a certain extent stating that one of the works of the village panchayets is to safeguard these stone edicts. If that is done, I think the whole matter can be easily solved and these stone edicts, these loving story tellers which depict the past history of our State can well be preserved. I believe this is one of the best methods by which we can inspire the villagers. As my friend said, these 'Mastigallu' and 'Viragallu' actually tell the story of the heroic villagers in the past. By submitting these few words, I commend the cut motion for the kind acceptance of the House.

Mr. SPEAKER.—Cut motion moved.—

"That the demand be reduced by Rs. 100."

ಶ್ರೀ ಎಲ್. ಸಿದ್ದಪ್ಪ (ಚೆನ್ನಗಿರಿ).—ಅಧ್ಯಕ್ಷರೇ, ಶ್ರೀ ಎಂ. ಲಿಂಗಣ್ಣನವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಖೋತಾ ನಿರ್ಣಯವನ್ನು ಸಮರ್ಥಿಸುತ್ತಾ ಒಂದೆರಡು ಅಂಶಗಳನ್ನು ಸಭೆಯ ಅವಗಾಹನೆಗೆ ತರಲಿಚ್ಛಿಸುತ್ತೇನೆ. ಶ್ರೀ ಲಿಂಗಣ್ಣನವರು ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಕಂಡುಬಂದ ಕೆಲವು edicts ವಿಚಾರ ಮಾತ್ರ ಪ್ರಸ್ತಾಪಮಾಡಿದರು. ಪ್ರಾಯಶಃ ನಮ್ಮ ಮೈಸೂರು ಸಂಸ್ಥಾನದ ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲಿಯೂ ಇಂತಹ ಹಿಂದಿನ ಸ್ಮಾರಕಗಳಿವೆ. ಅದರಲ್ಲಿಯೂ ಹೇರಳವಾಗಿ ಶಿವಮೊಗ್ಗ ಡಿಸ್ಟ್ರಿಕ್ಟ್‌ನಲ್ಲಿ, ನಗರ, ಶಿರಾಳಕೊಪ್ಪ ಮತ್ತು ಬೆಳಗಾವಿ—ಈ ಸ್ಥಳಗಳಲ್ಲಿಯೂ ಮತ್ತು ಶಿವಮೊಗ್ಗದ ಪಕ್ಕದ ಪ್ರಾಂತ್ಯವಾದ ನಾರ್ತ್ ಕೆನರಾ ಡಿಸ್ಟ್ರಿಕ್ಟ್ ಮತ್ತು ಅದರ ಪಕ್ಕದಲ್ಲಿನ ಸೊರಬ ತಾಲ್ಲೋಕಿನಲ್ಲಿಯೂ, ಬನನಾಸಿಯಲ್ಲೂ ಈ ರೀತಿ ಹಿಂದಿನ ಸ್ಮಾರಕಗಳಿವೆ. ಬಹಳ ದಿನಗಳಿಂದ ಇವುಗಳ ವಿಚಾರದಲ್ಲಿ ಎಚ್ಚರಿಕೆಯ ಕಾರ್ಯಕ್ರಮವನ್ನು ಸರ್ಕಾರದವರು ಕೈಗೊಂಡಿಲ್ಲ. ಈ ancient monuments ಯಾವುವು ಎಂಬ ಬಗ್ಗೆ ಇಂಡಿಯಾ ಸರ್ಕಾರದವರು ಒಂದು ಪಟ್ಟಿಯನ್ನು ತಯಾರಿಸಿ ಪ್ರಚುರಪಡಿಸಿದ್ದರು. ಅದರಲ್ಲಿ ಯಾವ ಯಾವ ಸ್ಮಾರಕಗಳ ಬಗ್ಗೆ ಇಂಡಿಯಾ ಸರ್ಕಾರದವರು ಎಚ್ಚರಿಕೆಯ ಕಾರ್ಯಕ್ರಮ ಕೈಗೊಳ್ಳುವುದೆಂಬುದನ್ನು ನಮೂದಿಸಿರುತ್ತಾರೆ. ನನಗೆ ತಿಳಿದಹಾಗೆ ಇಂಡಿಯಾ ಸರ್ಕಾರದ ಏಜೆನ್ಸಿ ಮೈಸೂರು ಸಂಸ್ಥಾನದಲ್ಲಿಲ್ಲ. ಹಾಗೇನಾದರೂ ಇದ್ದಪಕ್ಷದಲ್ಲಿ ಸರ್ಕಾರದವರು ಈ ಬಗ್ಗೆ ತಪಶೀಲು ತಿಳಿಸುತ್ತಾರೆಂದು ನಂಬಿರುತ್ತೇನೆ. ಈ ರೀತಿಯ ಒಂದು ಏಜೆನ್ಸಿ ಇಟ್ಟುಕೊಂಡು ಯಾವ ಯಾವ ಕಡೆಗಳಲ್ಲಿ ಇಂತಹ ಸ್ಮಾರಕಗಳಿವೆಯೋ ಅವುಗಳ ಬಗ್ಗೆ ಎಚ್ಚರಿಕೆಯ ಕಾರ್ಯಕ್ರಮ ತೆಗೆದುಕೊಳ್ಳುವ ವಿಚಾರವನ್ನು ಯೋಚಿಸಬೇಕಾದುದು ಅಗತ್ಯ. ಈಗ ಇಂಡಿಯಾ ಸರ್ಕಾರದವರು ತಯಾರು ಮಾಡಿರುವ ಪಟ್ಟಿಯಲ್ಲಿ ಬರದೇ ಇರತಕ್ಕ ಸ್ಮಾರಕಗಳೂ ಕೆಲವು ಇವೆಯೆಂಬುದು ನಮ್ಮ ಗಮನಕ್ಕೆ ಬಂದಿದೆ. ಈಗಾಗಲೇ ಶ್ರೀ ಲಿಂಗಣ್ಣನವರು, ಶ್ರೀ ಜೋಯಿಸ್‌ರವರು ತಯಾರುಮಾಡಿರುವ ಪಟ್ಟಿಯೊಂದನ್ನು ತಿಳಿಸಿರುತ್ತಾರೆ. ಅದನ್ನು ಪರಿಶೀಲಿಸಿ, ಇಂಡಿಯಾ ಸರ್ಕಾರದ ಗಮನಕ್ಕೆ ಬಾರದ ಸ್ಮಾರಕಗಳ ವಿಚಾರದಲ್ಲಿ ಯಾವ ರೀತಿಯ ಎಚ್ಚರಿಕೆಯ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂಬ ಬಗ್ಗೆ ಒಂದು ವ್ಯವಸ್ಥಿತ ಕಾರ್ಯ ಯೋಜನೆಯನ್ನು ಹಾಕಿಕೊಳ್ಳುವುದು ಅವಶ್ಯಕವೆಂದು ತಿಳಿಸುತ್ತೇನೆ.

Sri A. G. RAMACHNDRA RAO (Minister for Law and Education).—Sir, the Mysore Government has almost been a pioneer Government in the preservation as well as protection of these monuments. It has a distinguished record in so far as the scope of the work is concerned as well as the actual work turned out all these many years. Till recently there were only two departments—one the Archæological Department and the other the Research Department connected therewith. Just about the time after Independence, the monuments were classified as State Monuments and

National Monuments. The Government of India have taken over 109 institutions under National Monuments and the others are left to the State. We are thinking as to what should be done. Till the matter is finalised, the work of preserving and also protecting the National Monuments is being done by the State on agency basis, as it were, and the other work which the Government was doing so far is being continued by the department.

Sri L. SIDDAPPA.—Do you get any financial aid by the Central Government ?

Sri A. G. RAMACHANDRA RAO.—Even that has not been decided. It is in a inchoate stage. As the Hon'ble Member Sri Linganna has said in respect of these, monumental work has been done by Mr. Rice. I agree that better protection of these monuments is necessary. But what is contained in most of these edicts and monuments have been brought under manuscript and have been safely preserved. Nevertheless, it is equally important that these monuments ought to be preserved. Why no steps have been taken so far, I cannot say. At any rate Hon'ble Members might know that the Chair for Indology also was started in Mysore. The idea now is to put under the Chair of Indology, the Sanskrit in Government Colleges and the Oriental Research Department and the Archæological Department also together and bring them under the control of the University, as is being done in the London University. In the London University the Archæological Department works under the University control. The monuments are preserved by the Archæological Department and the research work is done by the various other departments. We have deputed the Professor of Indology, Professor Neelakanta Sastry, to Delhi and he has just returned ; only a few days ago, he returned and the results I do not know yet. I agree with the good sentiments expressed by both Hon'ble Members on behalf of the House. The Government is one with these sentiments about the sanctity as well as the necessity for preserving these national and historical monuments. The Government will do its best and I hope that the new arrangements of putting the above departments under one head and bringing them under the University control would be a proper one and would remedy many of these defects. With these observations, I request the Hon'ble Mover to withdraw his cut motion.

Sri M. LINGANNA.—Sir, on the assurance given I seek the leave of the House to withdraw my cut motion.

The cut motion was, by leave, withdrawn.

Mr. SPEAKER.—The second cut motion stands in the name of Sri S. Srinivasa Iyengar.

Sri A. G. RAMACHANDRA RAO.—It is the same thing as the one moved already, *viz.*, the condition of these historical monuments.

Sri S. SREENIVASA IYENGAR (T.-Narsipur).—Mr. Speaker, even though it relates to the same subject, I have some information to give to the House. Cut motions Nos. 2, and 3 stand in my name, Sir, and I may be permitted to move them together or to move one and speak on the other also, so that the time of the House may be saved.

Sri A. G. RAMACHANDRA RAO.—Sir, the second cut motion deals with historical monuments and the third with the Geological Department. It is better they are dealt with separately. I leave it to the Hon'ble Member.

Woeful condition of Historical Monuments in the State.

Sri S. SREENIVASA IYENGAR (T.-Narsipur).—Sir, I beg to move :

"That the demand under the head '36. Scientific Departments' for Rs. 6,29,000 be

(SRI S. SREENIVASA IYENGAR.)

reduced by Rs. 100 (to raise a debate on the wœful condition of the historical monuments in the State)."

Sir, my friends have already brought to the notice of the Government, the condition of the monuments called protected monuments in the State of Mysore and I have very little to place before this House, except to bring to the notice of Government that the provision made under the Archæological Department for 'Other charges' is only Rs. 1,000 while the pay of establishment is Rs. 35,000. Under this head the entire amount except Rs. 1,000 is provided for establishment. I feel Sir, that providing very little amount for other charges will serve no purpose. When there is a Department existing, I feel that greater and larger funds should have been placed at the disposal of the department to conduct their work in an intensive manner to preserve the monuments of the State. As they are Sir, the so-called protected monuments in the State of Mysore are maintained in a very bad condition. If you happen to visit Sreerangapatna and get into the Fort, there are magazines inside the fort where, not even animals can get in. These magazines are called protected monuments and *lantana* and other vegetation have grown so profusely that you cannot get an entry into it. When you go round the fort, the devastation caused in 1779 by the victor is still allowed to remain over just to lament on what things had happened then. I submit Sir, we must bestow greater attention and greater care to keep the place clean. The Tippu Sultan Palace, which is the most important for any visitor, it is impossible for anybody to get up that mound that is in the place where the Palace had stood and what is more, it looks ugly. Srirangapatna is a place which attracts visitors from all parts of the world and when they stand near that place the whole thing looks at its worst. The condition in which that spot is maintained reflects on the administration of the State. I submit Sir, that once they are taken as monuments under their protection, it is very necessary to see that at least with the existing establishment and with the existing provision, they must be maintained in a condition which makes them as places worth visiting by tourists.

Further Sir, there are other places as already mentioned by my friend, Sri Linganna, such as Talkad, Somanathapur and other places. He has already dealt with those places and said much about them and I think it is not necessary for me to repeat what has already been said.

Mr. SPEAKER.—Cut motion moved:

"That the demand be reduced by Rs. 100".

Sri A. G. RAMACHANDRA RAO.—Sir, I have very little to add except this fact that in no part of the world are monuments in memory of usurpers, intruders and conquerers are so well kept as in Mysore. Whether it is a matter of pride for us, I do not want to say. I can only say that they preserved them as best as possible. Every possible care is being bestowed; Government will continue to bestow the same attention hereafter.

Sri S. SREENIVASA IYENGAR.—I beg leave to withdraw the cut motion, Sir.

The cut motion was, by leave, withdrawn.

Sri S. SREENIVASA IYENGAR.—I do not propose to move the next cut motion, Sir.

The House will now rise for lunch and meet at 11-5 A.M.

The House rose for lunch at thirty-five minutes past ten of the Clock and reassembled at five minutes past eleven of the Clock.

[Mr. SPEAKER in the Chair.]

Sri M. MADIAH.—Sir, may I request the Chair to extend the time today so that some more cut motions may be taken up?

Mr. SPEAKER.—No extension so far as Demands are concerned.

Sri M. MADIAH.—More than one hour is taken for this particular Demand.

Mr. SPEAKER.—I cannot help it. That is the Rule. No extension can be granted so far as Demands are concerned. Sri P. R. Ramaiya may move the next cut motion.

Making the Halebid Temple as attractive as that of Belur.

Sri P. R. RAMAIYA (Basavangudi).—Sir, I beg to move:

"That the demand under the head "36. Scientific Departments" for Rs. 6,29,000 be reduced by Rs. 100 (to urge upon the Government the necessity of praying yet greater attention to the Halebid Temple and making it as attractive as Belur Temple).

ಈ ವಿಷಯವಾಗಿ ನಾನು ಕೆಲವು ಮುಖ್ಯವಾದ ಅಂಶಗಳನ್ನು ತಮ್ಮ ಮೂಲಕ ಈ ಸಭೆಯ ಗಮನಕ್ಕೆ ತರಬೇಕೆಂದು ಅಪೇಕ್ಷಿಸುತ್ತೇನೆ. ಬೇಲೂರು ದೇವಸ್ಥಾನದ ವಿಷಯಕ್ಕೆ ಕಳೆದ 20-25 ವರ್ಷಗಳಿಂದಲೂ ನಮ್ಮ ಸರ್ಕಾರದವರು ಬೇಕಾದಷ್ಟು ಗಮನಕೊಟ್ಟು ಅದನ್ನು ಬಹಳ ಉತ್ತಮ ಸ್ಥಿತಿಗೆ ತಂದಿದ್ದಾರೆ. ಪ್ರವಾಸಿಗಳು ಬಂದು ಆ ದೇವಾಲಯದ ವಾಸ್ತುಶಿಲ್ಪ ವೈಖರಿಯನ್ನು ನೋಡಿ ಆನಂದಪಡಲು ಬೇಕಾದಷ್ಟು ಅನುಕೂಲಗಳನ್ನು ಉಂಟುಮಾಡಿದ್ದಾರೆ. ಮತ್ತು ಶ್ರೀವರ್ಮಮಹಾರಾಜರವರು ಆ ದೇವಸ್ಥಾನದ ವಿಷಯಕ್ಕೆ ಬಹಳ ಗಮನವನು ಕೊಟ್ಟು ನಮ್ಮ ಹಿಂದಿನ ಪ್ರಭುಗಳ ಒಂದು ಮೂರ್ತಿಯನ್ನು ಕೂಡ ಅಲ್ಲಿ ಸ್ಥಾಪನೆಮಾಡಿಸಿದ್ದಾರೆ.

ಹಳೇಬೀಡು ದೇವಸ್ಥಾನವು ಶಿಲ್ಪಕಲಾದೃಷ್ಟಿಯಿಂದ ಬೇಲೂರು ದೇವಸ್ಥಾನಕ್ಕಿಂತಲೂ ಒಂದು ಕೈ ಮೇಲಾದದ್ದು ಎಂಬುದನ್ನು ನಾನು ತಜ್ಞರ ಅಭಿಪ್ರಾಯಗಳೊಡನೆ ತಿಳಿಸಲು ಇಲ್ಲಿ ನಿಂತಿದ್ದೇನೆ. ಆ ದೇವಸ್ಥಾನವು ಬೇಲೂರು ದೇವಸ್ಥಾನಕ್ಕಿಂತಲೂ ಅತ್ಯಂತ ವಿಶಾಲವಾಗಿಯೂ ಸುಂದರವಾಗಿಯೂ ಕಟ್ಟಲ್ಪಟ್ಟಿದೆ. ಅಲ್ಲಿನ ವಾಸ್ತು ಶಿಲ್ಪವೈಖರಿಯು ಅನೇಕ ಕಲಾವಿದರನ್ನು ಆಶ್ಚರ್ಯಗೊಳಿಸಿದೆ.

ಈ ಸಂಬಂಧವಾಗಿ ನಾನು ಶ್ರೀ ರೈಸ್ ಎಂಬ ಗ್ರಂಥಕರ್ತರು ಬರೆದಿರತಕ್ಕ, ಗೆಜೆಟಿಯರ್‌ನಿಂದ ಒಂದೆರಡು ಮಾತುಗಳನ್ನು ಈ ಸಭೆಯ ಗಮನಕ್ಕೆ ತರಲಪೇಕ್ಷಿಸುತ್ತೇನೆ.

"It is, however, surpassed in size and magnificence by its neighbour, the great temple at Halebid, which, had it been completed, is one of the buildings on which the advocate of Hindu architecture would desire to take his stand."

*   *   *   *

"If it were possible to illustrate the Halebid temple to such an extent as to render its peculiarities familar, there would be few things more interesting or more instructive than to institute a comparison between it and the Parthenon at Athens. Not that the two buildings are at all like one another; on the contrary, they form the two opposite—poles—the alpha and omega of architectural design; but they are the best examples of their class and between these two extremes lies the whole range of the art. The Parthenon is the best example we know of pure refined intellectual power applied to the production of an architectural design. Every part and every effect is calculated with mathematical exactness, and executed with a mechanical precision that never was equalled. The sculpture is exquisitely designed to aid the perfection of the masonry—severe and godlike, but with no condescension to the lower feelings of humanity.

The Halebid temple is the opposite of all this. It is regular, but with a studied variety of outline in plan, and even greater variety in detail. All the pillars of the Parthenon are identical, while no two facets of the Indian temple are the same; every convolution of every scroll is different. No two canopies in the whole building are alike, and every part exhibits a joyous exuberance of fancy scorning every mechanical restraint. All that is wild in human faith or warm in human feeling is found portrayed on these walls."

(SRI P. R. RAMAIYA.)

ಇಷ್ಟನ್ನೂ ಹಳೇಬೀಡು ದೇವಸ್ಥಾನದ ಬಗ್ಗೆ ಆ ಕಲಾವಿದರು ಕೊಟ್ಟಿರತಕ್ಕ ವಿಷಯ. ಇದನ್ನು ವಿಚಾರಮಾಡಿದರೆ ನಮ್ಮ ಪ್ರಪಂಚಕ್ಕೆಲ್ಲ ಒಂದು ನಿರ್ದಿಷ್ಟವಾದ ವಾಸ್ತುಶಿಲ್ಪ ವೈಖರಿಯ ಹೋಲಿಕೆಗಳನ್ನು ನಿರ್ಣಯಮಾಡಲು ಇದು ಒಂದು ದೊಡ್ಡ ಮಾದರಿಯಾಗಿದೆ. ಸರ್ಕಾರದವರು ಇದಕ್ಕೆ ಮೂರು ದೃಷ್ಟಿಗಳಿಂದ ಇನ್ನೂ ಹೆಚ್ಚಿನ ಗಮನಕೊಡಬೇಕಾಗಿದೆ. ಪ್ರವಾಸಿಗಳಾಗಿ ಬಂದು ನಮ್ಮ ದೇಶದ ಕಲಾವೈಖರಿಯನ್ನು, ಅತ್ಯದ್ಭುತ ಕಲಾನೈಪುಣ್ಯವನ್ನು ನೋಡಲು ಬರತಕ್ಕವರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನೊದಗಿಸುವುದು ಒಂದು ; ಎರಡನೆಯದಾಗಿ ಸಂಶೋಧನಾದೃಷ್ಟಿಯಿಂದ ಅಲ್ಲಿ ಇನ್ನೂ ಹೆಚ್ಚಿಗೆ ಕೆಲಸಕಾರ್ಯಗಳನ್ನು ಮಾಡಬೇಕೆಂಬ ಕಡೆಗೆ ಸರ್ಕಾರದವರು ಗಮನಕೊಡುವಂತೆ ಮಾಡಬೇಕಾದುದು ಮತ್ತೊಂದು ; ಮೂರನೆಯದಾಗಿ ಈ ಕಲಾಶಿಕ್ಷಣದ ವಿಷಯವಾಗಿ ಬೇಕಾದಷ್ಟು ಈಗಾಗಲೇ ಭಾಷಣಗಳೂ, ಚರ್ಚೆಗಳೂ, ಉಪನ್ಯಾಸಗಳೂ ನಡೆದಿರುತ್ತವೆ; ಆದರೆ ಬೆಂಗಳೂರಿನಲ್ಲಿ ಒಂದು ವಾಸ್ತುಶಿಲ್ಪ ಶಾಲೆಯನ್ನು ಏರ್ಪಡಿಸುವುದಕ್ಕೆ ಬದಲಾಗಿ, ಅಥವಾ ಆ ಬಗ್ಗೆ ಇಲ್ಲಿ ಪಾಠಗಳನ್ನು ಹೇಳುವುದಕ್ಕೆ ಬದಲಾಗಿ, ಇದೆಲ್ಲವನ್ನು ಹಳೇಬೀಡಿನಲ್ಲೇ ಹೇಳುವಂತೆಮಾಡಲು ಅಲ್ಲೇ ಒಂದು ವಿಶ್ವವಿದ್ಯಾನಿಲಯವನ್ನು ಏರ್ಪಡಿಸಲು ಅನುಕೂಲವಿದೆ. ಪ್ರಪಂಚದವರೆಲ್ಲಾ ಬಂದು, ಮುಖ್ಯ ಸಂಗತಿಗಳನ್ನು ತಿಳಿದುಕೊಳ್ಳಲು, ಒಳ್ಳೆಯ ಅವಕಾಶವಿದೆ. ಆದುದರಿಂದ ಈ ಎಲ್ಲ ದೃಷ್ಟಿಗಳಿಂದಲೂ ಇದನ್ನು ಇನ್ನೂ ಹೆಚ್ಚಾಗಿ ಆಕರ್ಷಣೀಯವಾಗುವಂತೆ ಮಾಡಲು ಸರ್ಕಾರ ಗಮನಕೊಡಬೇಕು.

ನಾನು ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ನಾನು ಕೆಲವು ತಿಂಗಳ ಹಿಂದೆ ಹಳೇಬೀಡು ದೇವಸ್ಥಾನಕ್ಕೆ ಹೋಗಿದ್ದೆನು. ಆಗ ನನ್ನ ಮನಸ್ಸಿಗೆ ಬಹಳ ವ್ಯಥೆಯುಂಟಾಯಿತು. ಕೆಲವು ಕಡೆ ಮೂರ್ತಿಗಳನ್ನೂ, ವಿಗ್ರಹಗಳನ್ನೂ ಹಾಗೆಯೇ ಜೋಡಿಸಿಟ್ಟುಬಿಟ್ಟಿದ್ದಾರೆ. ಕೆಲವು ದೇವಸ್ಥಾನಗಳು ಜೀರ್ಣೋದ್ಧಾರವಾಗದೆ ಹಾಗೆಯೇ ನಿಂತುಹೋಗಿವೆ. ಈ ಕೆಲಸವನ್ನು ಬೇಗ ಕೈಗೊಂಡು ಅವುಗಳ ಜೀರ್ಣೋದ್ಧಾರ ಕಾರ್ಯವನ್ನು ಮುಗಿಸಬೇಕೆಂದು ಸರ್ಕಾರದವರಿಗೆ ಒಂದು ಸೂಚನೆ ಕೊಡುತ್ತೇನೆ.

ಇನ್ನೊಂದು ಅತ್ಯಂತ ಶೋಚನೀಯವಾದ ವಿಚಾರವಿದೆ. ಈ ದೇವಸ್ಥಾನದಲ್ಲಿ ಕಾಡುಮೃಗಗಳು, ಎಂದರೆ, ಹುಲಿ, ಚಿರತೆ ಮುಂತಾದವುಗಳು ಅವಿತುಕೊಂಡು ಅಲ್ಲಿಗೆ ಹೋಗತಕ್ಕ ಪ್ರವಾಸಿಗಳಿಗೆ, ದೇವಸ್ಥಾನವನ್ನು ನೋಡಲು ಹೋದಾಗ ಅಪಾಯವುಂಟಾಗತಕ್ಕ ಅವಕಾಶವಿರುತ್ತದೆ. ಹೀಗೆ ಇಡೀ ಪ್ರಪಂಚವನ್ನೇ ವಿಸ್ಮಯಗೊಳಿಸುವಂಥ ಸ್ಥಳಗಳಲ್ಲಿ ಹೀಗೆ ಅಪಾಯ ಉಂಟಾಗಲು ಸರ್ಕಾರದವರು ಅವಕಾಶ ಕೊಡದಂತೆ ನೋಡಿಕೊಳ್ಳಬೇಕು.

ಹೀಗೆಲ್ಲಾ ಮಾಡಿ ಕಲೋಪಾಸಕರಿಗೆ ಅನುಕೂಲ ಉಂಟುಮಾಡಿಕೊಡಲು ಸರ್ಕಾರದವರ ಗಮನವನ್ನು ಅತ್ತಕಡೆಗೆ ಸೆಳೆಯುವ ಉದ್ದೇಶದಿಂದ ನಾನು ಈ ಸೂಚನೆಯನ್ನು ಸಭೆಯ ಮುಂದೆ ತಂದಿದ್ದೇನೆ.

Mr. SPEAKER.—Cut motion moved :

"That the demand be reduced by Rs. 100."

*ಶ್ರೀ ಬಿ. ಎನ್. ಬೋರಣ್ಣಗೌಡ (ಬೇಲೂರು).—ಸ್ವಾಮಿ, ಹಳೇಬೀಡು ವೈಖರಿಯ ವಿಚಾರವಾಗಿ ನನ್ನ ಸ್ನೇಹಿತರಾದ ಶ್ರೀಮಾನ್ ಪಿ. ಆರ್. ರಾಮಯ್ಯನವರು ಈಗಾಗಲೇ ಅನೇಕ ಸಲಹೆಗಳನ್ನು ನೀಡುತ್ತ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಆದರೆ ನಾನು ಹೇಳಬೇಕಾಗಿರತಕ್ಕದ್ದು ಇಷ್ಟೆ ; ಹಳೇಬೀಡು, ಬೇಲೂರಿಗೆ ಹತ್ತು ಮೈಲಿ ಫಾಸಲೆಯಲ್ಲಿರುತ್ತದೆ. ಈ ಹಿಂದೆ ಕೇಂದ್ರ ಸರ್ಕಾರದ ಮಾನ್ಯ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ್ಯೆ, ಈ ಹತ್ತು ಮೈಲಿಯ ರಸ್ತೆ ಬಹಳ ಕೆಟ್ಟು ಹೋಗಿರುವುದರಿಂದ, ಅಲ್ಲಿಗೆ ಬರತಕ್ಕ ಪ್ರವಾಸಿಗಳಿಗೆ ಅನುಕೂಲಪಡಿಸಲು ಈ ರಸ್ತೆಯನ್ನು ಟಾರುರಸ್ತೆಯನ್ನಾಗಿಯೋ ಅಥವಾ ಸಿಮೆಂಟ್ ಕಾಂಕ್ರೀಟ್ ರಸ್ತೆಯನ್ನಾಗಿಯೋ ಮಾಡಿಸಬೇಕೆಂದು ಮನವಿಮಾಡಿಕೊಂಡಿದ್ದಕ್ಕೆ, ಅದನ್ನು ಆದಷ್ಟು ಜಾಗ್ರತೆಮಾಡಿಸಿಕೊಡುವುದಾಗಿ ಅವರು ಆಗ ಭರವಸೆ ಕೊಟ್ಟಿದ್ದರು. ಆದರೆ ಇಲ್ಲಿಯವರೆಗೂ ಆ ರೀತಿ ಇನ್ನು ಯಾವ ಅನುಕೂಲವೂ ಆದಂತೆ ಕಾಣಬರುತ್ತಿಲ್ಲ.

ಇನ್ನು ಶ್ರೀಮಾನ್ ರಾಮಯ್ಯನವರು ಮಾತನಾಡುತ್ತ, ಆ ದೇವಸ್ಥಾನದಲ್ಲಿ ಕಾಡುಮೃಗಗಳು ಅವಿತುಕೊಂಡಿರುತ್ತವೆಂದು ಹೇಳಿದರು. ಆದರೆ ಆ ರೀತಿ ಏನೂ ಇಲ್ಲ. ಈ ಹಿಂದೆ ಒಂದು ಚಿರತೆ ಆ ದೇವಸ್ಥಾನದಲ್ಲಿ ಅಕಸ್ಮಾತ್ತು ಬಂದು ಸೇರಿದ್ದ ಸಂಗತಿ ನನಗೆ ತಿಳಿದುಬಂದ ಕೂಡಲೇ ನಾನೇ ಹೋಗಿ ಅದನ್ನು ಬಂದೂಕಿನಿಂದ ಹೊಡೆದುಹಾಕಿರುತ್ತೇನೆ. ಹಾಗೆ ಯಾವ ಕಾಡುಮೃಗಗಳೂ ಅಲ್ಲಿ ಬಂದು ಸೇರುತ್ತಿಲ್ಲ. ಅಂಥದಕ್ಕೆ ಅವಕಾಶವೇ ಇಲ್ಲ. ಆ ರೀತಿ ಜನರು ಹೆದರತಕ್ಕ ಸಂದರ್ಭವೇ ಇಲ್ಲ. ಅಲ್ಲಿಯೂ ಜನರು ವಾಸಿಸುತ್ತಿದ್ದಾರೆ.

ನಾನು ಮತ್ತೊಂದು ವಿಷಯವನ್ನು ಸರ್ಕಾರದವರ ಅವಗಾಹನೆಗೆ ತರಬೇಕೆಂದಿರುತ್ತೇನೆ. ಈಗ ಬೇಲೂರಿಗೆ ಕೊಟ್ಟಿರುವಂತೆ ಈ ಸ್ಥಳಕ್ಕೂ, ಈ ಕಲಾದೃಷ್ಟಿಯಿಂದಲೂ ಕೂಡ, ಬೇಗ ವಿದ್ಯುಚ್ಛಕ್ತಿಯನ್ನೊದಗಿಸಬೇಕಾಗಿದೆ. ಈ ವಿದ್ಯುಚ್ಛಕ್ತಿಯ ಅನುಕೂಲವಿಲ್ಲದೆ ಅಲ್ಲಿಗೆ ಬರತಕ್ಕ ಕಲೋಪಾಸಕರಿಗೆ ಒಂದು ದೊಡ್ಡ ಅನಾನುಕೂಲವಾಗಿದೆ. ಆದುದರಿಂದ ಸರ್ಕಾರದವರು ಬೇಗ ಈ ಅನುಕೂಲವನ್ನು ಅಲ್ಲಿಗೆ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಬಹುಶಃ ಇದಕ್ಕೆಲ್ಲಾ ಒಂದು ಸಾವಿರ ರೂಪಾಯಿ ಆದರೆ ಸಾಕಾಗಬಹುದು. ಈ ಭಾಗದ ಜನರಿಗೆ ವ್ಯವಸಾಯಕ್ಕೂ ಈ ಕರೆಂಟ್ ಬಂದರೆ ಬಹಳ ಅನುಕೂಲವಾಗುತ್ತದೆ. ಈಗ ಈ ಪ್ರದೇಶವೂ ಸಹ ಒಂದು ಡಿಸ್ಟ್ರೆಸ್ ಏರಿಯಾ ಆಗಿದೆ. ಆದರೆ ಇಲ್ಲಿಯ ಭೂಮಿ ಬಹಳ ಫಲವತ್ತಾದದ್ದು. ಹತ್ತಿ, ಕೊತ್ತಂಬರಿ, ಇತ್ಯಾದಿ ಬೆಲೆ ಬಾಳತಕ್ಕ ಪದಾರ್ಥಗಳನ್ನು ಬೆಳೆಯಲಾಗುತ್ತಿದೆ. ಈ ದೃಷ್ಟಿಯಿಂದ ಸಹ ಜನರು ಎಲೆಕ್ಟ್ರಿಸಿಟಿಗೆ ಬಹಳ ಕಾತುರರಾಗಿದ್ದಾರೆ. ಇದನ್ನು ತಾವು ಬೇಗ ಕೈಕೊಂಡರೆ ಪ್ರವಾಸಿಗಳಿಗೂ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ.

Sri A. G. RAMACHANDRA RAO (Minister for Law and Education).—I thank Sri P. R. Ramiah for appreciating the work that has been done at Belur and I also realise his anxiety to have similar work done at Halebid. Unfortunately or fortunately, the control has now passed on to the Central Government. Both

* Indicates that the speech has not been revised by the Member concerned.

Halebid and Belur are declared as national monuments and have been taken by the Central Government. And till final arrangements are made, the Government of Mysore are doing this on an agency basis. For the current year, for the preservation of these national monuments, the Government of India have granted Rs. 67,000.

Sri T. N. MUDLIGIRI GOWDA (Kunigal).—What about Kaidal?

Sri A. G. RAMACHANDRA RAO.—Rs. 67,000 is meant for all the national monument institutions.

Government will do their best in expending the amount that has been granted and they will also press for further grants.

Regarding the facilities to be created for tourists at art centres and starting of art schools, the starting of art schools are important especially at Halebid the monuments of which are world famous. I know that the Government of India also are very anxious to preserve and promote the sculptural interest that is found here and I assure the Hon'ble Member that Government will do their best in the matter and I hope he will withdraw the cut motion.

Sri P. R. RAMAIYA.—I Seek the leave of the House to withdraw the cut motion.

The cut motion was, by leave, withdrawn.

ಶ್ರೀ ಎಸ್. ಎಂ. ಮಾರಿಯಪ್ಪ (ಪೆರಿಯಾಪಟ್ಟಣ).—ಸ್ವಾಮಿ, ನನ್ನ ಖೋತಾ ಸೂಚನೆ ಈ ರೀತಿಯಿದೆ: "36, ವಿಜ್ಞಾನ ಶಾಸ್ತ್ರಗಳಿಗೆ ಸಂಬಂಧಪಟ್ಟ ಇಲಾಖೆಗಳು" ಎಂಬ ಬಾಬಿನಲ್ಲಿ ಕೋರಿರತಕ್ಕ 6,29,000 ರೂಪಾಯಿಗಳ "ಡಿಮಾಂಡ್" ಮಾನವಿಯ ಸಂಬಂಧದಲ್ಲಿ ನೂರು ರೂಪಾಯಿಗಳನ್ನು ಕಡಮೆ ಮಾಡಬೇಕು. (ಈ ಇಲಾಖೆಗಳಲ್ಲಿ ಹಿಂದುಳಿದ ಕೋಮುಗಳವರಿಗೆ ಸೇರಿದ ಜನಗಳನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುವ ಸಂಬಂಧದಲ್ಲಿರುವ ಷರತ್ತಿನ ನಿಯಮಗಳನ್ನು ಮತ್ತು ಷರತ್ತುಗಳನ್ನು ಉತ್ತಮಗೊಳಿಸಬೇಕೆಂಬ ವಿಚಾರವನ್ನು ಸರ್ಕಾರದವರಿಗೆ ಒತ್ತಿ ಹೇಳುವುದಕ್ಕಾಗಿ)

ಸ್ವಾಮಿ, ಈ ಖೋತಾ ನಿರ್ಣಯವನ್ನು ತಂದ ಉದ್ದೇಶ, ಈಗ ಯಾವ ಯಾವ ಇಲಾಖೆಗಳಲ್ಲಿ ಹಿಂದುಳಿದ ಕೋಮಿನವರ ಪ್ರಾತಿನಿಧ್ಯವಿಲ್ಲವೋ ಅಂಥ ಇಲಾಖೆಗಳಲ್ಲಿ ಸರಿಯಾದ ಪ್ರಾತಿನಿಧ್ಯ ದೊರಕುವಂತೆ ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯ ಮಾಡಬೇಕು ಎಂದು. ಮೊನ್ನೆ ನಮ್ಮ ಮಿತ್ರರಾದ ಶ್ರೀ ವಾರ್ಕ್ ಮಾದಯ್ಯನವರು ಇದೇ ತೆರದ ಒಂದು ಸೂಚನೆಯನ್ನು ಸಭೆಯ ಮುಂದಿಡುತ್ತಾ, ತಮ್ಮ ಪಂಗಡದವರಿಗಿರುವ ಕಷ್ಟವನ್ನು ಮನಬಿಚ್ಚಿ ಹೇಳುತ್ತೇನೆಂದು ಹೇಳಿದರು. ಅವರಿಗೆ ಸರಿಯಾಗಿ ಪ್ರಾತಿನಿಧ್ಯವಿಲ್ಲದಿರುವುದು ಅವರು ಬಾಯಿಬಿಚ್ಚಿ ಕೇಳದಿರುವುದರಿಂದ ಎಂದು ಸದಸ್ಯರು ಹೇಳಿದರು. ಆದರೆ ನಾವು ಹಾಗೆ ಬಾಯಿಬಿಚ್ಚಿ ಕೇಳಿದರೂ ಅದನ್ನು ಕಿವಿಗೊಟ್ಟು ಕೇಳುವವರೇ ಇಲ್ಲವಲ್ಲ ಎಂದು ನನಗೆನ್ನಿಸುತ್ತದೆ. ಪ್ರತಿಯೊಂದು ಇಲಾಖೆಯಲ್ಲೂ ಪ್ರತಿಯೊಂದು ಅಧಿಕಾರದಲ್ಲೂ ಹಿಂದುಳಿದ ಕೋಮಿನವರನ್ನು ಮರೆತಿದ್ದಾರೆ. ಏಕೆಂದರೆ ಈಗಿನಕಾಲ ಹೇಗಿದೆಯೆಂದರೆ, ಬಾಯಿದ್ದವನು ಬರದಲ್ಲಿ ಗೆದ್ದ ಎನ್ನುವಂತೆ, ಯಾರ ಕೂಗು ಹೆಚ್ಚಿಗೆ ಕೇಳಿಬರುತ್ತಿದೆಯೋ, ಯಾರು ಪ್ರತಿಯೊಂದು ಸಾರಿಯೂ ಒತ್ತಾಯಮಾಡುತ್ತಾ, ಪ್ರತಿಯೊಂದು ಸಭೆಯಲ್ಲೂ, ಕಮಿಟಿಯಲ್ಲೂ ತಮಗೆ ಪ್ರಾತಿನಿಧ್ಯವಿಲ್ಲವೆಂದು ಕೇಳುತ್ತಿದ್ದಾರೋ ಅವರಿಗೆಯೇ ಹೊರತು, ಯಾರಿಗೆ ನಿಜವಾಗಿಯೂ ಪ್ರಾತಿನಿಧ್ಯವಿಲ್ಲದೆ ಹೋಗಿದೆಯೋ ಯಾರು ಪದೇ ಪದೇ ಒತ್ತಾಯಮಾಡಿ ಕೇಳುವುದಿಲ್ಲವೋ ಅವರಿಗಾಗಿರುವ ಅನ್ಯಾಯವನ್ನು ಕೇಳುವವರೇ ಇಲ್ಲ.

ಒಬ್ಬ ಸದಸ್ಯರು.—ನೀವು ಹೇಳಿಲ್ಲ!

ಶ್ರೀ ಎಸ್. ಎಂ. ಮಾರಿಯಪ್ಪ.—ಕೇಳುವವರಿದ್ದರೆ ತಾನೆ ಹೇಳುವುದು! ಉದಾಹರಣೆಗೆ ಸರ್ಕಾರದವರು ಉದ್ಯೋಗ ಹಂಚಿಕೆಯ ವಿಷಯದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ಎಂದು ಏರ್ಪಾಡು ಮಾಡಿದ್ದಾರೆ. ಅವರಿಗೇನೂ ಎಲ್ಲ ಕೋಮಿನವರಿಗೂ ಇಂಥ ರೀತಿಯಲ್ಲಿ ಕೊಡಬೇಕೆಂದು ಹೇಳಿಲ್ಲ. ಆದ್ದರಿಂದ ಸರ್ಕಾರದವರು ಯಾವ ಇಲಾಖೆಗಾಗಲಿ ಉದ್ಯೋಗಕ್ಕೆ ನೇಮಿಸಿ ಕೊಳ್ಳುವಾಗ ಆಯಾ ಇಲಾಖೆಗಳಲ್ಲಿ ಪ್ರತಿ ಹಿಂದುಳಿದ ಪಂಗಡದವರ ಪ್ರಾತಿನಿಧ್ಯ ಎಷ್ಟಿದೆ, ಯಾವ ಯಾವ ಪಂಗಡದವರ ಅರ್ಥಿಕಾಭಿವೃದ್ಧಿ ಎಷ್ಟರಮಟ್ಟಿಗಿದೆಯೆಂಬುದನ್ನು ಗಮನಿಸಿ ಹೇಗೆ ನೇಮಿಸಿಕೊಳ್ಳಬೇಕೆಂದು ಒಂದು ನಿರ್ಣಯವನ್ನು ಮಾಡಿ ಪಬ್ಲಿಕ್‌ಸರ್ವಿಸ್ ಕಮಿಷನ್ನಿಗೆ ಒಂದು ನಿರೂಪವನ್ನು ಕಳುಹಿಸಿಕೊಟ್ಟರೆ ಅಲ್ಲಿಗೆ ಪ್ರತಿಯೊಂದು ಕೋಮಿನವರಿಗೂ ಪ್ರತಿಯೊಂದು ಇಲಾಖೆಯಲ್ಲೂ ಪ್ರಾತಿನಿಧ್ಯ ದೊರತೇ ದೊರೆಯುತ್ತದೆ. ಎಲ್ಲಿಯವರೆಗೆ ಆ ರೀತಿಯಾದಂಥಾ ಒಂದು ಅಧಿಕಾರವನ್ನು ಪಬ್ಲಿಕ್‌ಸರ್ವಿಸ್ ಕಮಿಷನ್ನಿಗೆ ನೀವು ಕೊಡುವುದಿಲ್ಲವೋ ಅಲ್ಲಿಯವರೆಗೆ ಕೋಮುವಾರು ಭೇದಭಾವನೆ ಇದ್ದೇ ಇರುತ್ತದೆ. ಈಗ ದೇಶದ ಮೂಲೆ ಮೂಲೆಗಳಲ್ಲೂ ನಮಗೆ ಪ್ರಾತಿನಿಧ್ಯವಿಲ್ಲ, ತಮಗೆ ಪ್ರಾತಿನಿಧ್ಯವಿಲ್ಲ ಎಂಬ ಕೂಗು ಕೇಳಿಬರುತ್ತಿದೆ. ಅದರಲ್ಲೂ ಮುಖ್ಯವಾಗಿ ವಿಜ್ಞಾನ ಶಾಸ್ತ್ರಗಳಿಗೆ ಸಂಬಂಧಪಟ್ಟ ಇಲಾಖೆಗಳಲ್ಲಿ ಹಿಂದುಳಿದ ಪಂಗಡಗಳವರನ್ನು ಕೇಳುವವರೇ ಇಲ್ಲ. ಹೀಗೆ ಹೇಳುವುದರಲ್ಲಿ ನಾನು ಹಿಂದುಳಿದ ಕೋಮುಗಳವರೆಂದರೆ ನಿಮ್ನ ತರಗತಿಯವರನ್ನು ಬಿಟ್ಟು ಉಳಿದ ಹಿಂದುಳಿದವರಿಗೆ ಮಾತ್ರ ಅನ್ವಯಿಸಿ ಹೇಳುತ್ತಿದ್ದೇನೆಂದು ದಯವಿಟ್ಟು ತಿಳಿಯಬೇಕು. ಏಕೆಂದರೆ, ಇಂಡಿಯಾ ಸರ್ಕಾರದವರೇ ರಾಜ್ಯಾಂಗದ ಪ್ರಕಾರ ನಿಮ್ನ ತರಗತಿಯವರಿಗೆ ಕಾದಿಡಬೇಕೆಂದಿರುವುದರಿಂದ ಅವರೂ ಬಲವಂತವಾಗಿ ತಮ್ಮನ್ನು ಕೇಳುತ್ತಿದ್ದಾರೆ, ನೀವೂ ಕೊಡುತ್ತಿದ್ದೀರಿ. ಮಿಕ್ಕ ಹಿಂದುಳಿದ ಕೋಮಿನವರ ವಿಷಯ ಹಾಗಲ್ಲ. ಅವರ ಕೂಗನ್ನು ಕೇಳುವವರೇ ಇಲ್ಲ. ಈಗಲಾದರೂ ಮಿಕ್ಕ ಹಿಂದುಳಿದ ಜನಾಂಗದವರ ಆರ್ಥಿಕ ಹೀನದೆಶೆಯನ್ನು ಗಣನೆಗೆ ತೆಗೆದುಕೊಂಡು ಎಲ್ಲ ಪಂಗಡಗಳವರಿಗೂ ಆಡಳಿತ

(ಶ್ರೀ ಎಸ್. ಎಂ. ಮರಿಯಪ್ಪ.)

ವರ್ಗದಲ್ಲಿ ಇಷ್ಟಿಷ್ಟು ಶೇಕಡಾವಾರು ಪ್ರಾತಿನಿಧ್ಯವಿರಬೇಕೆಂದು ಒಂದು ಕಾನೂನುಮಾಡಿ ಪ್ರತಿಯೊಬ್ಬರಿಗೂ ಎಲ್ಲಾ ಇಲಾಖೆಗಳಲ್ಲೂ ಪ್ರಾತಿನಿಧ್ಯ ದೊರಕಿಸಿ ಕೊಡುತ್ತೀರೆಂದು ನಂಬಿದ್ದೇನೆ.

Mr. SPEAKER.—Cut Motion moved :

"That the demand be reduced by Rs. 100."

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ, ಈ ಖೋತಾನಿರ್ಣಯದ, ಹಾಗೂ ಇದನ್ನು ಮಂಡಿಸುತ್ತಾ ಮಾತನಾಡಿದ ಮಾನ್ಯ ಸದಸ್ಯರ ಮನೋಗತ ನನಗಾದರೂ ಗೊತ್ತಾಗಲಿಲ್ಲ. ಅವರು ಅಷ್ಟಾಗಿ ಸ್ಪಷ್ಟವಾಗಿ ತಿಳಿಸಲಿಲ್ಲ. ಆದರೂ ಅವರ ಗಮನಕ್ಕೆ ಒಂದು ವಿಷಯವನ್ನು ನಾನು ತಿಳಿಸಬಯಸುತ್ತೇನೆ. ಸರ್ಕಾರದ Executive ನವರಿಗೆ ಈಗ ರಿಕ್ರೂಟ್‌ಮೆಂಟ್ ಮಾಡುವ ಅಧಿಕಾರವೇ ಇಲ್ಲ. ಪಬ್ಲಿಕ್‌ಸರ್ವಿಸ್ ಕಮಿಷನ್ನಿನವರೇ ನಿಯಮ ನಿಬಂಧನೆಗಳನ್ನನುಸರಿಸಿ ಎಲ್ಲ ನೇಮಕಗಳನ್ನೂ ಮಾಡುತ್ತಿದ್ದಾರೆ. ಅವರು ನಿಮ್ನ ತರಗತಿಯವರಿಗೆ ಯಾವ ಯಾವ ರೀತಿಯಲ್ಲಿ ರಿಯಾಯಿತಿ ಕೊಡಬೇಕೆಂದು ನಿಬಂಧನೆಗಳನ್ನಿಟ್ಟುಕೊಂಡಿದ್ದಾರೆ. ಅಲ್ಲದೆ ಆ ಡಿಪಾರ್ಟ್‌ಮೆಂಟಿನಲ್ಲಿ ಆ ಇಲಾಖಾ ಮುಖ್ಯಾಧಿಕಾರಿಗಳು ಮತ್ತು ಡೆಪ್ಯುಟಿ ಡೈರೆಕ್ಟರವರು ಎಲ್ಲರೂ ಹಿಂದುಳಿದ ಪಂಗಡದವರೇ ಆಗಿದ್ದಾರೆಂಬುದು ತಮ್ಮಗೆಲ್ಲಾ ಗೊತ್ತೆ ಇದೆ. ಜೊತೆಗೆ, ಈಚೆಗೆ ಗವಿಯಪ್ಪ ಮತ್ತು ಅಣ್ಣಯ್ಯಪ್ಪ ಎಂಬಿಬ್ಬರನ್ನು ಗೆಜೆಟೆಡ್ ಹುದ್ದೆಗೆ ಏರಿಸಿದ್ದೇವೆ. ಇವರಿಬ್ಬರೂ ಹಿಂದುಳಿದ ಪಂಗಡದವರೇ ಎಂಬಂಶವನ್ನು ತಮಗೆ ತಿಳಿಸಬಯಸುತ್ತೇನೆ.

ಆದರೆ ಒಂದು ಕಷ್ಟ ಏನು ಬರುತ್ತಿದೆಯೆಂದರೆ, ಟೆಕ್ನಿಕಲ್ ಇಲಾಖೆಗಳಲ್ಲಿ ಸ್ಥಾನಗಳು ಖಾಲಿಬಿದ್ದಾಗ ಡಿಪ್ರೆಸ್ಡ್ ಕ್ಲಾಸ್ ಅಭ್ಯರ್ಥಿಗಳು ಯಾರೂ ಇಲ್ಲದೆ ಇದ್ದರೆ, ಬೇರೆ ಯಾರನ್ನೂ ನೇಮಿಸಿಕೊಳ್ಳದೆ ಇರುವುದಕ್ಕಾಗುವುದಿಲ್ಲ.

ಈ ಪ್ರಕಾರ, ಸರ್ಕಾರದವರಿಗೆ ನಿಮ್ನ ತರಗತಿಯವರಿಗೆ ಸಾಕಾದಷ್ಟು ಪ್ರಾತಿನಿಧ್ಯ ದೊರಕಿಸಿಕೊಟ್ಟು ಅವರನ್ನು ಅಭಿವೃದ್ಧಿಗೆ ತರಬೇಕೆಂಬ ವಿಷಯದಲ್ಲಿ ತೀವ್ರಾಸಕ್ತಿಯಿದೆ. ಸಾಧ್ಯವಾದ ಕಡೆಗಳಲ್ಲೆಲ್ಲಾ ಅವರಿಗೆ ಅನುಕೂಲಮಾಡಿಕೊಡಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ನಿಮ್ನ ತರಗತಿಯವರಿಗಾಗಲಿ, ಹಿಂದುಳಿದ ತರಗತಿಯವರಿಗಾಗಲಿ ಎಷ್ಟುಮಟ್ಟಿಗೆ ರಿಯಾಯಿತಿ ಕೊಡಬಹುದೋ ಅಷ್ಟು ಕೊಡುವುದಕ್ಕೆ ಸರ್ಕಾರದವರಿಗೇನೂ ಅಭ್ಯಂತರವಿಲ್ಲ ಮತ್ತು ಅದನ್ನು ಆಗ ಮಾಡುವುದಕ್ಕೆ ಸರ್ಕಾರದವರು ಹೆಚ್ಚಿನ ಅಭಿಲಾಷೆಯುಳ್ಳವರಾಗಿದ್ದಾರೆಂದು ಹೇಳಿ ಈ ಖೋತಾ ನಿರ್ಣಯವನ್ನು ಮಾನ್ಯಸದಸ್ಯರು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Sri S. M. MARIYAPPA.—I seek the permission of the House to withdraw my cut motion.

The cut motion was, by leave, withdrawn.

(Sri S. Gopala Gowda rose.)

Mr. SPEAKER.—On the main Demand you want to speak ?

Sri S. GOPALA GOWDA.—Yes.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಈ ೩೬ನೆಯ ಡಿಮ್ಯಾಂಡನ್ನು ವಿರೋಧಿಸುತ್ತಾ, ಈ ಸಂಬಂಧವಾಗಿ ಭೂಗರ್ಭ ಶಾಖೆಯವರ ಮತ್ತು ಇತರ ವಿಜ್ಞಾನ ಶಾಖೆಗಳಿಗೆ ಸಂಬಂಧಪಟ್ಟ ಇಲಾಖೆಗಳ ಕಡೆಗೆ ಸರ್ಕಾರದವರ ಗಮನವನ್ನು ಸೆಳೆಯುವುದಕ್ಕಾಗಿ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ.

ಈಗ ತಮ್ಮೆಲ್ಲರಿಗೂ ತಿಳಿದಿರುವಂತೆ ನಮ್ಮ ಸಂಸ್ಥಾನದಲ್ಲಿ ಅಳಿದು ಹೋದ ಸಾಮ್ರಾಜ್ಯಗಳ ಅವಶೇಷಗಳಾಗಿ ಬಿದನೂರು, ಇಕ್ಕೇರಿ, ಕೆಳದಿ, ಆರಗ, ಕವಲೇದುರ್ಗ ಮುಂತಾದ ಕೆಲವು ಐತಿಹಾಸಿಕ ಸ್ಥಳಗಳಿವೆ. ಇವುಗಳನ್ನು ಶಾಸ್ತ್ರೀಯವಾಗಿ ಶೋಧನೆಮಾಡಿ ಅದರಿಂದ ನಾವು ಏನೇನು ಉಪಯೋಗಗಳನ್ನು ಪಡೆದುಕೊಳ್ಳಬಹುದೋ ಅಷ್ಟು ಉಪಯೋಗಗಳನ್ನು ಪಡೆಯುಕೊಳ್ಳಲು ಇದುವರೆಗೂ ನಮಗೆ ಸಾಧ್ಯವಾಗಿಲ್ಲ. ಹಿಂದೆ ರೈಸ್ ಮಹಾಶಯರು ಒಂದು ಗೆಜೆಟಿಯರ್ ಬರೆದು ಅದರಲ್ಲಿ ಸಂಕ್ಷೇಪವಾಗಿ ಅಲ್ಲಿಯ ಶಿಲಾಶಾಸನಗಳನ್ನೂ ಮತ್ತು ಆಗಿನ ಕಾಲಕ್ಕೆ ಸಂಬಂಧಪಟ್ಟ ಇತಿಹಾಸಗಳಲ್ಲಿ ಹೇಳಿರುವ ವಿಷಯಗಳ ಸಂಬಂಧವಾಗಿ ಅಳಿದುಳಿದ ಕುರುಹುಗಳನ್ನೂ ಮತ್ತು ಇತಿಹಾಸಕ್ಕೆ ಸಂಬಂಧಪಟ್ಟ ಹಾಗೆ ಕೆಲವು ಮಾತುಗಳನ್ನೂ ಬರೆದಿಟ್ಟಿದ್ದಾರೆ. ಅದು ಬಿಟ್ಟರೆ ಅನಂತರದಲ್ಲಿ ಯಾವ ಹೆಚ್ಚಿನ ಪ್ರಯತ್ನವೂ ಆ ಮಾರ್ಗದಲ್ಲಿ ನಡೆದಿಲ್ಲವೆಂತಲೇ ಹೇಳಬೇಕು. ಇಂದು ನಮ್ಮಲ್ಲಿರತಕ್ಕ ಸಂಶೋಧನಾ ಇಲಾಖೆಗಳು ಆ ಬಗ್ಗೆ ಅಷ್ಟರಮಟ್ಟಿಗೆ ಯಾವ ಕೆಲಸವನ್ನೂ ಕೈಕೊಂಡಿಲ್ಲ. ಅಂದರೆ ಅವುಗಳಿಗೆ ನಾವು ಮಾಡುತ್ತಿರುವ ಹಣ ಸಹಾಯವೂ ಕೂಡ ಬಹಳ ಕಡಮೆಯೆಂದೇ ಹೇಳಬೇಕು. ಕಾರಣವೇನೆಂದರೆ, ವೈಜ್ಞಾನಿಕ ದೃಷ್ಟಿಯಿಂದ ನಾವು ಕೈಕೊಳ್ಳಬೇಕಾದ ಕೆಲಸಗಳನ್ನು ನಾವು ಇನ್ನೂ ಕೈಕೊಳ್ಳಲು ಸಾಧ್ಯವಿಲ್ಲ. ಈ ಇಲಾಖೆಗೆ ಸಂಬಂಧಪಟ್ಟಹಾಗಿರುವ ಹೆಚ್ಚುಭಾಗದ ಕೆಲಸಗಳ ಮೇಲೆ ಕೇಂದ್ರಕ್ಕೆ ಹೆಚ್ಚಿನ ಜವಾಬ್ದಾರಿಯಿದೆ ಮತ್ತು ಈ ಇಲಾಖೆಗಳ ವಿಷಯಗಳು ಕೇಂದ್ರಕ್ಕೆ ಸಂಬಂಧಪಟ್ಟವುಗಳಾಗಿ ಆಡಳಿತಾಧಿಕಾರ ಕೇಂದ್ರೀಕೃತವಾಗಿದೆ. ಇದರಿಂದಾಗಿ ಸಂಸ್ಥಾನಕ್ಕೆ ಸಂಬಂಧಪಟ್ಟಂಥ ಅನೇಕ ವಿಷಯಗಳನ್ನು ಕೇಂದ್ರ ಕೈಕೊಳ್ಳಲಾರದು. ಆದುದರಿಂದ ಈ ಸಂಬಂಧದಲ್ಲಿ ಸಂಸ್ಥಾನವೂ ಕೂಡ ವೈಜ್ಞಾನಿಕ ದೃಷ್ಟಿಯಿಂದ ಪರಿಶೋಧನೆ ನಡೆಸಿ ಪರಿಶೀಲನೆಮಾಡಿ ಕಂಡುಕೊಳ್ಳಬಹುದಾದ ಎಷ್ಟೋ ವಿಷಯಗಳಿವೆ ಆ ಬಗ್ಗೆ ನಾವು ಇನ್ನೂ ಹೆಚ್ಚುಹೆಚ್ಚು ಶ್ರಮವಹಿಸಿ ಕೆಲಸ ಕೈಕೊಳ್ಳಬೇಕಾಗುತ್ತದೆ. ನಾನು ಹೇಳುವುದು ಕೇವಲ ಪುರಾತನ ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಪರಿಶೋಧನೆಗಳು ಮಾತ್ರವಲ್ಲ; ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಹಾಗೂ, ಅಂದರೆ, ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟಹಾಗೆ, ಜನಜೀವನಕ್ಕೆ ಸಂಬಂಧಪಟ್ಟ ಹಾಗೆ ಮತ್ತು social service ಗೆ ಸಂಬಂಧಪಟ್ಟ ಹಾಗೆ—ಅನೇಕ ಅಂಶಗಳನ್ನು ಕರಾರುವಾಕ್ಕಾಗಿ ವೈಜ್ಞಾನಿಕವಾಗಿ ಕಂಡುಹಿಡಿಯುಕೊಳ್ಳತಕ್ಕದ್ದು ಅಗತ್ಯ.

11-30 A.M.

ಈ ಅಂಕಿ ಅಂಶಗಳ ಬಗ್ಗೆ ಕೂಡ ನಾವು ಹೆಚ್ಚು ಶ್ರಮವಹಿಸಬೇಕಾಗುತ್ತದೆ. ಇದಕ್ಕಾಗಿ ಒಂದು ಇಲಾಖೆ ಕೂಡ ಇತ್ತೀಚೆಗೆ ಪ್ರಾರಂಭವಾಗಿದೆ. ಅದಿನ್ನೂ ಕಾರ್ಯೋನ್ಮುಖವಾಗಿಲ್ಲವೆಂದು ಕಂಡುಬರುತ್ತದೆ. ಹೀಗೆ ಪ್ರತಿ ಬಾಬಿನಲ್ಲಿಯೂ ಕಾರ್ಯ ನಡೆಯಬೇಕಾಗಿದೆ.

ಈ ಹೊತ್ತು ಮಲೆನಾಡಿನಲ್ಲಿ ಆಗುವ ಅಡಿಕೆ ಬೆಳೆಗೆ ಅನೇಕ ವಿಧವಾದ ರೋಗರುಜಿನಗಳು ಬರುತ್ತಿವೆ. ಈ ಅಡಕೆ ವ್ಯವಸಾಯದಲ್ಲಿ ಯಾವರೀತಿ ಮಾರ್ಪಾಡು ಮಾಡಬೇಕೆಂಬುದನ್ನು ಕಂಡುಹಿಡಿಯಬೇಕಾಗಿದೆ. ರೈತರಿಗೆ ಅನುಭವದಿಂದ ಕೆಲವು ವಿಷಯಗಳು ಗೊತ್ತಿದ್ದರೂ ಕೂಡ, ವೈಜ್ಞಾನಿಕ ದೃಷ್ಟಿಯಿಂದ ಇನ್ನೂ ಹೆಚ್ಚಿನ ವಿಷಯಗಳನ್ನು ತಿಳಿದುಕೊಂಡು ಈ ಬೆಳೆಯನ್ನು ಇನ್ನೂ ಹೆಚ್ಚು ಲಾಭದಾಯಕವಾಗಿ ಮಾಡಿಕೊಳ್ಳಬಹುದು. ಈ ಬೆಳೆಗೆ ಬರುವ ರೋಗಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಬಹುದು. ಇದರಿಂದ ಅವರಿಗೆ ಹೆಚ್ಚು ಸಂಪಾದನೆಗೆ ಕಾರಣವಾಗುತ್ತದೆ. ಈ ಬಗ್ಗೆ ತೀರ್ಥಹಳ್ಳಿಯ ಹತ್ತಿರ ಒಂದು ಸಂಶೋಧನ ಕೇಂದ್ರವನ್ನು ತೆರೆಯಬೇಕೆಂದು ಕಾರ್ಯಕ್ರಮ ಕೈಕೊಳ್ಳಲು ಕೇಂದ್ರ ಸರ್ಕಾರದವರು ಪ್ರಾರಂಭಮಾಡಿದ್ದಾರೆ. ಇದಕ್ಕೆ ಅಗತ್ಯವಾದ ಭೂಮಿಯನ್ನು ತೆಗೆದುಕೊಂಡು ಕೆಲಸ ಪ್ರಾರಂಭ ಮಾಡುವುದರಲ್ಲಿದ್ದಾರೆ. ಇದನ್ನು ಜಾಗ್ರತೆ ಕೈಕೊಳ್ಳುವುದು ಒಳ್ಳೆಯದು. ಇದಕ್ಕೆ ಸಂಬಂಧಪಟ್ಟ ಹಾಗೆ ಬೇರೆ ಕೆಲವು ವಿಷಯಗಳನ್ನು ಹೇಳುವುದಾದರೆ, ಇದಕ್ಕೆ ಭೂಮಿಯನ್ನು ಅಕ್ವೈರ್‌ಮಾಡುವ ಸಂಬಂಧದಲ್ಲಿ ರೈತರ ಹಿತವನ್ನು ಪರಿಗಣಿಸದೆ, ಅವರಿಗೆ ಸೂಕ್ತ ಪರಿಹಾರವನ್ನು ಕೊಡದೆ ಕೆಲಸಮಾಡುತ್ತಿದ್ದಾರೆ. ಇದು ಬೇರೆ ವಿಷಯ. ಈ ಸಂದರ್ಭದಲ್ಲಿ ಅದನ್ನು ಪ್ರಸ್ತಾವಿಸುವುದು ಅಪ್ರಕೃತ. ಅಂತೂ ಅಡಿಕೆಯ ವ್ಯವಸಾಯದ ವಿಷಯದಲ್ಲಿ ಹೆಚ್ಚು ಸಂಶೋಧನೆ ನಡೆಯಬೇಕಾದುದು ಅತ್ಯಗತ್ಯ.

ನಮ್ಮ ಕಾಡುಗಳ ಅಭಿವೃದ್ಧಿಯ ಬಗ್ಗೆ ನಾವು ಎಷ್ಟು ಪ್ರಯತ್ನಪಡುತ್ತಿದ್ದೇವೋ ಅಷ್ಟು ಸಾಲದು. ನಮ್ಮ ದೇಶದಲ್ಲಿ, ಅದರಲ್ಲಿಯೂ ಮಲೆನಾಡಿನಲ್ಲ ಅತ್ಯಂತ ಬೆಲೆಯುಳ್ಳ ಮರಗಳು ದೊರೆಯುತ್ತವೆ. ಇವುಗಳನ್ನು ರಕ್ಷಣೆಮಾಡಿ, ಅಭಿವೃದ್ಧಿಪಡಿಸಿ, ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದು ನಮಗಿನ್ನೂ ತಿಳಿಯದು ಎಂದು ಹೇಳಿದರೆ ತಪ್ಪಾಗಲಾರದು. ಅನೇಕ ಬೇರೆ ಬೇರೆ ಕೆಲಸಗಳಿಗಾಗಿ ಮರಗಳನ್ನು ಕಡಿಯುತ್ತಿದ್ದೇವೆ. ಉದಾಹರಣೆಗೆ, ಭದ್ರಾವತಿ ಕಾರ್ಖಾನೆಗೆ ಸೌದೆಯನ್ನೊದಗಿಸಲು ಒಂದು ಕಡೆಯಿಂದ ಅರಣ್ಯದ ಮರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕಡಿಯುತ್ತಾ ಹೋಗುತ್ತಿದ್ದೇವೆ. ಆದರೆ 'ಅಫಾರಿಸ್ಟೇಷನ್', ಎಂದರೆ ಕಾಡನ್ನು ಬೆಳೆಸುವುದಕ್ಕೆ ಮತ್ತು ಬಹಳ ಬೆಲೆಯುಳ್ಳ ಮರಗಳನ್ನು ಬೆಳೆಸುವುದಕ್ಕೆ ಹೆಚ್ಚು ಪ್ರಯತ್ನಮಾಡುತ್ತಿಲ್ಲ. ಅಲ್ಲದೆ ಹೆಚ್ಚುಹೆಚ್ಚಾಗಿ ಕಾಡುಗಳಿಗೆ ಬೆಂಕಿಬಿದ್ದು ಪ್ರತಿವರ್ಷವೂ ಸುಟ್ಟುಹೋಗುತ್ತಿವೆ. ಇದನ್ನು ಹೇಗೆ ಪರಿಣಾಮಕಾರಿಯಾಗಿ ತಡೆಗಟ್ಟಬಹುದೆಂದು ಯೋಚನೆ ಮಾಡುತ್ತಿಲ್ಲ.

Mr. SPEAKER.—Does this fall under this Demand? Please see the headings under this Demand.

ಶ್ರೀ ಎಸ್. ಗೋಪಾಲಗೌಡ.—ನಾನು ಈ ವಿಷಯಗಳನ್ನೆಲ್ಲಾ ಈ ಡಿಮ್ಯಾಂಡಿನ ಸಂಬಂಧದಲ್ಲಿ ಮಾತನಾಡುವುದಕ್ಕೆ ಕಾರಣವಿಷ್ಟೆ: ಈ ಬಾಬಿನಲ್ಲಿ ಸೇರಿರತಕ್ಕ ಇಲಾಖೆಗಳ ಕೆಲಸಕಾರ್ಯಗಳಲ್ಲಿ ಒಂದು ಹೆಚ್ಚಿನ ರೀತಿಯ ವೈಜ್ಞಾನಿಕದೃಷ್ಟಿ ಬೆಳೆಯಬೇಕೆಂಬುದನ್ನು ಒತ್ತಿ ಹೇಳುವುದಕ್ಕಾಗಿ, ಈ ಇಲಾಖೆಗಳಲ್ಲಿ ಬರಿಯ ಬೆಂಗಳೂರಿನಲ್ಲಿ ಕುಳಿತುಕೊಂಡು ಆಫೀಸನ್ನು ನಡೆಸಿಕೊಂಡು ಹೋಗುವ ಕೆಲಸಮಾತ್ರವಲ್ಲದೆ, ಅವುಗಳ ಕಾರ್ಯಚಟುವಟಿಕೆಗಳನ್ನು ವಿಸ್ತಾರಗೊಳಿಸಿ ಜನಜೀವನಕ್ಕೆ ಸಂಬಂಧಪಟ್ಟಂತೆ ಅಂಕಿಅಂಶಗಳನ್ನೊದಗಿಸಿ ವೈಜ್ಞಾನಿಕ ಸಂಶೋಧನೆಯನ್ನು ಮಾಡಿ ಜನರಿಗೆ ಹೆಚ್ಚು ಉಪಯೋಗವಾಗುವ ಕೆಲಸಗಳನ್ನು ಮಾಡಬೇಕು. ಈ 6,29,000 ರೂಪಾಯಿಗಳ ಮೊತ್ತವೇನಿದೆಯೋ ಇದರಿಂದ, ಮುಂದುವರಿಸಿಕೊಂಡು ಹೋಗಬೇಕೆಂಬ ದೃಷ್ಟಿಯಿಂದ ಮಾತ್ರ ಇರುವ ಇಲಾಖೆಗಳನ್ನು ಮುಂದುವರಿಸುವುದರಿಂದ ಏನೂ ಉಪಯೋಗವಾಗಲಾರದು. ಆದುದರಿಂದ ಈ ಇಲಾಖೆಯವರ ಗಮನ ಹೆಚ್ಚುಹೆಚ್ಚಾಗಿ ಜನಜೀವನದ ಬೇರೆಬೇರೆ ಭಾಗಗಳ ಮೇಲೆ ಬೀಳಬೇಕು. ದೇಶದಲ್ಲಿ ವೈಜ್ಞಾನಿಕ ಮನೋವೃತ್ತಿ ಬೆಳೆಯುವಂತೆ ಮಾಡಬೇಕು. ಈ ಇಲಾಖೆಗಳು ಹೆಚ್ಚು ಶ್ರಮವಹಿಸಿ ದೇಶಕ್ಕೂ ಜನತೆಗೂ ಹೆಚ್ಚು ಅನುಕೂಲವಾಗುವ ಕೆಲಸಗಳನ್ನು ಮಾಡಬೇಕು. ಈ ದೃಷ್ಟಿಯಿಂದ ಈ ಡಿಮ್ಯಾಂಡನ್ನು ವಿರೋಧಿಸಿ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ.

ಶ್ರೀ ಟಿ. ಎನ್. ಮುಡಲಗಿರಿಗೌಡ (ಕುಣಿಗಲು).—ಮಾಡಬೇಕೆಂದು ಹೇಳಿದಮೇಲೆ ವಿರೋಧಿಸುವುದೇಕೆ?

ಶ್ರೀ ಎಸ್. ಗೋಪಾಲಗೌಡ.—ಮಾಡಿಲ್ಲವೆಂದು ವಿರೋಧಿಸಿದ್ದು. ಇಲಾಖೆಗಳಿವೆ, ಇವನ್ನು ಮುಂದುವರಿಸಿಕೊಂಡು ಹೋಗಬೇಕು ಎಂಬ ನೀತಿ ಸಮರ್ಪಕವಾದುದಲ್ಲ. ಹೆಚ್ಚುಹೆಚ್ಚಾಗಿ ವೈಜ್ಞಾನಿಕವಾಗಿ, ಅಂಕಿಅಂಶಗಳನ್ನಿಟ್ಟುಕೊಂಡು ಸಂಶೋಧನೆಮಾಡಿ, ಅದರ ಮೇಲೆ ಬೇರೆ ಕೆಲಸಗಳನ್ನು ಸಾಧಿಸುತ್ತಾ ಮುಂದುವರಿಸಿಕೊಂಡು ಹೋದರೆ ಅದರಿಂದ ಹೆಚ್ಚು ಅನುಕೂಲವಾಗುತ್ತದೆ, ಉಪಯೋಗವಾಗುತ್ತದೆ ಎಂಬ ವಿಷಯವನ್ನು ಒತ್ತಿ ಹೇಳಲು ಇದನ್ನು ವಿರೋಧಿಸಿ ಮಾತನಾಡಿದ್ದೇನೆ.

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಶಾಖೆಗಳ ಮಂತ್ರಿಗಳು).—ಸ್ವಾಮಿ, ಮಾನ್ಯ ಸದಸ್ಯರ ಆಶಯವೇನಿದೆಯೋ ಅದೇ ಸರ್ಕಾರದ ಆಶಯ. ಅನೇಕ ಇಲಾಖೆಗಳಲ್ಲಿ ವೈಜ್ಞಾನಿಕ ದೃಷ್ಟಿಯಿಂದ ಕೇಂದ್ರಗಳು ಏರ್ಪಾಡಾಗಬೇಕು ಮತ್ತು ಸಂಶೋಧನೆಯಾಗಬೇಕು ಎಂಬ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ. ಸರ್ಕಾರದವರು ಅಲ್ಲಲ್ಲಿ ಏರ್ಪಾಡು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಆದರೆ ಎಲ್ಲಕಡೆಯೂ ಹೀಗೆ ಮಾಡಬೇಕೆಂದರೆ ಸಾಧ್ಯವಿಲ್ಲ. ಇನ್ನೂ ಹೆಚ್ಚು ಶ್ರದ್ಧೆಯಿಂದ, ಮುತುವರ್ಜಿಯಿಂದ ಕೆಲಸಮಾಡಬೇಕೆಂದು ಹೇಳುವುದು ನ್ಯಾಯ. ಇದಕ್ಕೆ ಸರ್ಕಾರದವರು ಪ್ರಯತ್ನಮಾಡುತ್ತಿದ್ದಾರೆ. ಆದುದರಿಂದ ಈ ಡಿಮ್ಯಾಂಡನ್ನು ಸಭೆ ಒಪ್ಪಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Demand for Grant—Education.

Mr. SPEAKER.—The question is:

"That a sum not exceeding Rs. 6,29,000 be granted to the Government to defray the charges which will come in course of payment during the year ending 31st day of March 1954, in respect of 'Scientific Departments'."

The motion was adopted.

DEMAND No. 18—EDUCATION.

37. EDUCATION.

Mr. SPEAKER.—Motion moved:

"That a sum not exceeding Rs. 3,57,46,000 be granted to the Government to defray the charges which will come in course of payment during the year ending 31st day of March 1954, in respect of 'Education'."

Sri A. G. RAMACHANDRA RAO (Minister for Law and Education).—In respect of Education, Sir, as Hon'ble Members are aware, a day will be allotted for discussing the Report of the Education Reforms Committee. The whole system in Mysore is in a melting pot. We have come to a point where we have to consider and decide what we should have. In view of the discussion on that Report which is to come, I shall confine myself only to making a few remarks as to the actual working of the department during the year.

As regards University Education, affiliation was granted to the B.Sc. Degree courses started by the National College, Bangalore, Sharada Vilas College, Mysore and to the B.Com. Course started by the St. Joseph's College, Bangalore.

A post of Professor of Indology was sanctioned and Professor K. A. Neelakanta Sastry, Retired Professor of Indian History, University of Madras, was appointed for a period of two years on a contract basis.

Posts of Assistant Professors were sanctioned in Philology, Tamil, Hindi, Telugu, Home Science, Indology, Journalism and Public Administration. Additional posts of Assistant Professors were sanctioned in Kannada, Sanskrit, Philosophy, Chemistry, Mathematics and Botany.

Further, Sir, as all the Members are aware, the 27th Session of the Indian Philosophical Conference was held under the auspices of the University of Mysore on the 28th to 30th December 1952. His Highness the Maharaja addressed the Congress. Dr. S. Radhakrishnan, Vice-President of Indian Republic inaugurated the conference.

One important feature was, the capitation fee, *i.e.*, the payment of double fee for those who are not Mysoreans, in University Colleges and Institutions was abolished.

The Budget for 1952-53, the revised Budget, is Rs. 47,50,000 and 53-54, it is 46.75 lakhs.

Regarding the Department of Education, permission was accorded to the opening of District Board High Schools at Santhebachahalli, Krishnarajpet Taluk and Sakrepatna, Chikmagalur District. Nine District Board High Schools and one private High School were admitted for purposes of grant-in-aid.

Middle School Education.—Seven New Type Middle Schools were converted into pucca Middle Schools. Thirty-two New Type Middle Schools were opened.

Primary Education.—Fifty-one New Primary Schools have been sanctioned during the year. Fifty additional teachers have been given to needy primary schools.

One hundred departmental teachers were trained in Bharat Seva Dal at Vidyanagar camp and Mysore during the summer vacation.

Two hundred and seventy teachers of primary schools are undergoing one year training at the special Teacher Training Centre, Vidyanagar.

Forty-six teachers have been selected for the Basic Education Training during the year.

Development Schemes of the Departments:—As against a requirement of Rs. 6.66 lakhs under the Five-Year Plan, only a sum of Rs. 1.60 lakhs was allotted and this sum was utilised for payment of grants to nine District Board High Schools for sanctioning of 20 additional teachers to Middle Schools and 50 additional teachers to primary schools and for opening of 32 New Type Middle Schools and 51 New Primary Schools.

Special Educational Development to Scheduled Tribes :—Of the sum of Rs. 2 lakhs proposed for the year 1952-53 for special Educational Development to Scheduled Tribes, a sum of Rs. 35,000 has been set apart for Educational facilities such as starting of special primary schools for these tribes, opening of separate hostels and award of scholarships and other financial concessions.

Community Projects.–Development plans of education for the two taluks of Sorab and Shikaripur selected under the scheme of "Rural *cum* Urban Community Project Development" have been formulated at an aggregate cost of Rs. 7 lakhs for the 3 year period. Under this development, it is proposed to start 27 New Primary Schools, to convert 83 Aided Primary Schools to Government Schools, to sanction 35 additional teachers to start another Range Office, to sanction new school buildings and equipment, to start 10 Basic Schools and a Trade School, to pay equipment grant to High Schools and to encourage extra curricular activities. In the meanwhile, the gift of 10 school buildings on the occasion of the birth day of Sri Jawaharlal Nehru, Prime Minister of India, by the villagers of these two taluks has been accepted for which 10 per cent earnest money has been deposited in the local Treasury by the villagers.

Intensive Educational Development.—As part of the intensive Basic and Social Education Programme, the area round about Vidyanagar has been selected for this intensive development and the plans costing Rs. 99,225 have been approved by the Government of India and the Central Government have sanctioned a contribution of Rs. 62,064 which represents 66 per cent of the recurring expenditure for 6 months and 50 per cent of the non-recurring expenditure during 1952-53.

The question of the re-organisation of the administrative set-up of the Department is also under consideration so as to decentralise the work of the Central Office and to make the inspection and supervisory work in the Districts more effective.

Regarding Technical Education, the first year examination has been changed into public examination in the Sri Jayachamarajendra Occupational Institute, Bangalore and other Institutions. The Diploma in Civil Draughtsmanship awarded by the Institute has been recognised by Government of India as equivalent to the corresponding Diplomas of recognised Institutions for purposes of recruitment to subordinate posts in Central Government.

Diploma courses in Civil, Electrical and Mechanical Engineering were started in the Occupational Institute, Davangere, with effect from this year. The building and equipment grants provided for the Institute are being utilised for the purpose. The Institute has been named after the Donor.

An estimate amounting to Rs. 1,10,000 has been sanctioned for the construction of the Central Block of the buildings of the Occupational Institute, Hassan. Equipment worth nearly 2.6 lakhs of rupees have so far been purchased for the Institute and that equipment worth Rs. 1.2 lakhs are expected to be received by the end of this year.

As in the case of University College, capitation fees for non-Mysorean in all these Technical Schools have been abolished.

The Central Board of Technical Examinations has been constituted with the Special Officer as Chairman for conducting the Diploma and Certificate Examinations of all the Technical Institutions, including the Engineering School, Sri Krishnarajendra Silver Jubilee Technological Institute and the Silver Jubilee Technical School, Bhadravathi, and the recognition of these examinations has been notified by the Government of India for the purpose of recruitment for service both in Central as well as in State Government.

(SRI A. G. RAMACHANDRA RAO).

This, in short, is the brief working of the Department of Education during the year.

Mr. SPEAKER.—Now Cut Motions. The first cut motion stands in the name of Sri H. K. Sivarudrappa.

Sri H. K. SIVARUDRAPPA.—I am not moving the cut motion, Sir.

Mr. SPEAKER.—The second cut motion is in the name of Sri M. Madiah. The third cut motion, also in his name, refers to the same subject-matter but it includes University. So, the Hon'ble member can move the 3rd cut motion.

Creation of increased facilities for Scheduled Class Students.

Sri M. MADIAH (Nanjangud—Scheduled Castes).—Sir, I beg to move:

> "That the demand under the head "37. Education" for Rs. 3,57,46,000 be reduced by Rs. 100 (to press the Government to do their utmost to create increased facilities for the Scheduled Castes students studying particularly in High Schools and in University institutions in the State)."

ಸ್ವಾಮಿ, ಈ ಖೋತಾ ಸೂಚನೆಯ ಮೇಲೆ ನಾನು ಮಾತನಾಡುತ್ತಾ, ಮೊದಲನೆಯದಾಗಿ ಈಸಾರಿ ಸರ್ಕಾರದವರಿಗೆ ನನ್ನ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಕಾರಣ ಇಷ್ಟೆ. ಯಾವ ಅನುಕೂಲಗಳನ್ನು ಹೆಚ್ಚಿಸಬೇಕೆಂದು ನಾನು ಕೇಳಿದ್ದೇನೋ ಅದೇ ಸಂಬಂಧವಾಗಿ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕಾಗಿ ಕಳೆದ ಸಾಲಿನಲ್ಲಿ ಕೊಟ್ಟಿದ್ದ ಮೊಬಲಗಿಗಿಂತ ಈ ಸಾರಿ ಎರಡು ಸಾವಿರ ರೂಪಾಯಿ ಜಾಸ್ತಿ ಕೊಟ್ಟಿದ್ದಾರೆ. ಆದ್ದರಿಂದ ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಇದೇ ರೀತಿಯಲ್ಲಿ ತಮ್ಮ ವಿಶಾಲವಾದ ನೀತಿಯನ್ನು ಎಲ್ಲಾ ಐಟಂಗಳ ವಿಚಾರದಲ್ಲೂ ಸಹ ಪ್ರಾಯಶಃ ಸಕಾಲದಲ್ಲಿ ತೋರಿಸುತ್ತಾರೆಂದು ನಂಬಿದ್ದೇನೆ. ಆದರೂ ಸಹ ಕೆಲವು ತೊಂದರೆಗಳಿವೆಯಾದ್ದರಿಂದ, ನಾನು ಸೂಚಿಸಿದಂತೆ ಸರಿಪಡಿಸುತ್ತೀರೆಂದು ನಂಬಿದ್ದೇನೆ.

ಮೊದಲನೆಯದಾಗಿ, ಬಡ್ಜೆಟ್ ನೋಡಿದರೆ, ಹೈಸ್ಕೂಲು ವಿದ್ಯಾಭ್ಯಾಸಮಾಡುವ ನಿಮ್ನ ತರಗತಿಯವರಿಗೆ, ಎಷ್ಟು ಅನುಕೂಲಕೊಡಬೇಕೋ ಅಷ್ಟು ಕೊಟ್ಟಿಲ್ಲ. ಇದರ ವಿಚಾರದಲ್ಲಿ ಒತ್ತಾಯಮಾಡಲು ಈಗ ನಿಂತಿದ್ದೇನೆ. ಕಳೆದ ಸಾರಿ 1951–52ರಲ್ಲಿ ವಿದ್ಯಾರ್ಥಿ ವೇತನಕ್ಕಾಗಿ ಎಷ್ಟುಮಂದಿ ನಿಮ್ನ ವರ್ಗದವರು ಅರ್ಜಿ ಹಾಕಿದ್ದರು, ಅದರಲ್ಲಿ ಎಷ್ಟು ಜನರಿಗೆ ಕೊಟ್ಟಿದ್ದಾರೆ ಎಂದು ಬಡ್ಜೆಟ್ಟಿನಿಂದ ನೋಡಿದರೆ 1,598 ನಿಮ್ನ ತರಗತಿಯ ವಿದ್ಯಾರ್ಥಿಗಳು ಅರ್ಜಿಹಾಕಿದ್ದರು, 528 ಜನರಿಗೆ ಕೊಟ್ಟಿದೆ, ಕೊಡದಿರುವವರು 1,070 ಜನ. ಇದಕ್ಕೆ ಕಾರಣವೇನೆಂದರೆ, ಬಡ್ಜೆಟ್ಟಿನಲ್ಲಿ ತಾವು ಕೊಟ್ಟಿರುವ ಮೊಬಲಗು ಸಾಲದಿರುವುದು ಎಂಬುದನ್ನು ಹೇಳಬೇಕಾದ್ದೇ ಇಲ್ಲ. ಸ್ವಾಮಿ, ವರ್ಷೇ ವರ್ಷೇ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ ಮಾಡಿರುವ ನಿಮ್ನವರ್ಗದ ಮಕ್ಕಳು ಹೈಸ್ಕೂಲುಗಳಿಗೆ ಬರುತ್ತಿದ್ದಾರೆ. ವರ್ಷೇ ವರ್ಷೇ ಇವರ ಸಂಖ್ಯೆ ಹೆಚ್ಚುತ್ತಿದೆ. ಅದಕ್ಕೆ ತಕ್ಕಹಾಗೆ ಸೌಕರ್ಯ ಹೆಚ್ಚಿಸದೇ ಹೋದರೆ ಅವರ ಪ್ರಗತಿ ಖಂಡಿತ ನಿರೀಕ್ಷಿಸಿರುವಷ್ಟು ಮುಂದುವರಿಯುವುದಿಲ್ಲ. ಇದನ್ನು ಎಲ್ಲರೂ ಗಮನಿಸಬೇಕಾದ್ದು. ಇದು ಮುಖ್ಯವಾದ ವಿಚಾರ.

ನಿಮ್ನ ವರ್ಗದವರಿಗೆ ವಿದ್ಯಾಭ್ಯಾಸ ಸೌಕರ್ಯದ ವಿಚಾರದಲ್ಲಿ ತಕ್ಕ ಉತ್ತೇಜನ ಕೊಡುವ ಭರವಸೆಯನ್ನೇನೋ ಈಗಾಗಲೇ ಮಾನ್ಯ ವಿದ್ಯಾಸಚಿವರು ಕೊಟ್ಟರು. ಆದರೆ ಈ ಬಗ್ಗೆ ಬಡ್ಜೆಟ್ಟಿನಲ್ಲಿ ಒದಗಿಸಿರುವ ಅಂಕಿ ಅಂಶಗಳ ಕಡೆಗೆ ತಮ್ಮ ಮನಸ್ಸು ಸೆಳೆದರೆ ಹೈಸ್ಕೂಲ್ ವಿದ್ಯಾ ವ್ಯಾಸಂಗಕ್ಕಾಗಿ $7\frac{1}{2}$ ರೂಪಾಯಿನ 462 ಸ್ಕಾಲರ್‌ಷಿಪ್‌ಗಳನ್ನು ಮಾತ್ರ provide ಮಾಡಿರುತ್ತಾರೆ. ಇದರ ಒಟ್ಟು ಮೊಬಲಗು 36,522 ರೂಪಾಯಿಗಳಾಯಿತು. ಇದರ ಹಿಂದಿನ ಸಾಲಿನಲ್ಲಿಯೂ ಹೀಗೆಯೇ provide ಮಾಡಿರುತ್ತಾರೆ. ಈ ಸ್ಕಾಲರ್‌ಷಿಪ್ಪಿನ ಒಟ್ಟು ಮೊಬಲಗು ಒಂದು ಲಕ್ಷ ಚಿಲ್ಲರೆಯಷ್ಟೇ ಎಂದು ಗೊತ್ತುಮಾಡಿದೆ. ಆದರೆ ಇವರ proportionate ಸಂಖ್ಯೆ ಎಷ್ಟಿದೆಯೋ ಅದಕ್ಕನುಗುಣವಾಗಿ ಸ್ಕಾಲರ್‌ಷಿಪ್ ಹಂಚಿಕೆಯಾಗದೆ ಇರುವುದರಿಂದ ಇವರ ಪ್ರಗತಿಗೆ ಕುಂದುಂಟಾಗಿದೆ. ಪ್ರೈಮರಿ ಮತ್ತು ಹೈಸ್ಕೂಲ್ ವ್ಯಾಸಂಗದ ಬಗ್ಗೆ ಇವರಿಗೆ free educational facilities ಕೊಟ್ಟು, ಕಾಲೇಜು ವ್ಯಾಸಂಗಕ್ಕೆ ಬರುವ ಹೊತ್ತಿಗೆ ಇವರಿಗೆ ತಕ್ಕ ಪ್ರಾತಿನಿಧ್ಯ ದೊರಕದೆ ಇದ್ದರೆ ಅಲ್ಲಿಗೆ drop ಆಗುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು, ಈ ಖೋತಾ ಸೂಚನೆಯಲ್ಲಿ ತಿಳಿಸಿರುವಂತೆ, ಹೈಸ್ಕೂಲು ಮತ್ತು ಕಾಲೇಜು ವ್ಯಾಸಂಗ — ಇವೆರಡಕ್ಕೂ ನಿಮ್ನವರ್ಗದವರಿಗೆ ಸ್ಕಾಲರ್‌ಷಿಪ್ ಕೊಡುವ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂದು ಕೋರುತ್ತೇನೆ. ಈಗ ಈ ನಿಮ್ನ ವರ್ಗದವರಲ್ಲಿ ಸುಮಾರು ಎರಡು ಸಾವಿರ ಮಂದಿ ವಿದ್ಯಾರ್ಥಿಗಳು ಹೈ ಸ್ಕೂಲ್ ವ್ಯಾಸಂಗದಲ್ಲಿ ನಿರತರಾಗಿದ್ದಾರೆ. ಆದರೆ ಇವರಿಗೆ ಕೊಡತಕ್ಕ ಸ್ಕಾಲರ್‌ಷಿಪ್ ಸಂಖ್ಯೆ ನೋಡಿದರೆ, ಕೇವಲ ನಾಲ್ಕು ನೂರು ಚಿಲ್ಲರೆಯಷ್ಟು ಮಾತ್ರವಾಗಿದೆ. ಇಷ್ಟು ಕಡಮೆ ಸಂಖ್ಯೆಯ ಸ್ಕಾಲರ್‌ಷಿಪ್‌ನಿಂದ ಈ ವರ್ಗದ ಜನರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಬೇರೆ ಮಾರ್ಗವಿಲ್ಲದೆ ತ್ರಿಶಂಕು ಸ್ವರ್ಗದಲ್ಲಿರಬೇಕಾದ ಪರಿಸ್ಥಿತಿ ಒದಗಿರುತ್ತದೆ. ಹೀಗಾಗಿ ಇವರು ಸಮಾಜಕ್ಕೆ ಒಂದು ಹೊರೆಯಾಗಿ ಪರಿಣಮಿಸಿ, ಅದರಿಂದ ಇವರ ಸ್ಥಿತಿ ಗತಿಗಳೇ ಹದಗೆಟ್ಟು ಹೋಗಲು ಆಸ್ಪದವಾಗುತ್ತದೆ. ಆದಕಾರಣ ಈಗಿನ ವಿದ್ಯಾಭ್ಯಾಸಕ್ರಮವೇ ಮಾರ್ಪಟ್ಟು, ವಿದ್ಯಾಭ್ಯಾಸದ ಬಗ್ಗೆ ನಿಮ್ನವರ್ಗದವರಿಗೆ ಅತ್ಯರ್ಥವಾಗಿ ಸೌಕರ್ಯ ಮಾರ್ಪಟ್ಟು, ಇವರ ವಿಚಾರದಲ್ಲಿ ಸರ್ಕಾರದ ನೀತಿಯೇ ಕ್ರಾಂತಿಕಾರಕವಾಗಿ ರೂಪುಗೊಳ್ಳಬೇಕು. ನಮ್ಮದು Welfare State. "The greatest well-being of the greatest numher" ಎಂಬುದು ಈ ನಿಮ್ನವರ್ಗದವರಿಗೆ ಪೂರ್ಣವಾಗಿ ಅನ್ವಯಿಸುವಂತೆ ಸರ್ಕಾರದವರು ಇವರ ವಿಚಾರದಲ್ಲಿ ತಮ್ಮ ಮನೋಧರ್ಮವನ್ನಳವಡಿಸಿಕೊಳ್ಳ

ಬೇಕು. ಜನ ಸಾಮಾನ್ಯರ ದೃಷ್ಟಿಯಿಂದ ವಿದ್ಯಾಭ್ಯಾಸ ಪ್ರಗತಿಯ ಬಗ್ಗೆ ಸರ್ಕಾರದವರು ಈಗ ತಯಾರಿಸಿರುವ ಬಡ್ಜೆಟ್ ಅಷ್ಟು ಆಶಾದಾಯಕವಾಗಿಲ್ಲ, ಪ್ರಗತಿದಾಯಕವಾಗಿಲ್ಲ ಮತ್ತು ಸ್ವಾಗತಾರ್ಹವಾಗಿಲ್ಲವೆಂದು ಜನಸಾಮಾನ್ಯರು ಹೇಳುತ್ತಾರೆ. ವಿದ್ಯಾ ಪ್ರಗತಿಯಲ್ಲಿ ಒಂದು ಕೋಮಿಗೂ ಇನ್ನೊಂದು ಕೋಮಿಗೂ ಅಂತರ ಜಾಸ್ತಿಯಾಗಿದೆ. ಈ ಅಂತರವು ಆದಷ್ಟು ಕಡಮೆ ಆಗುವ ಕಡೆಗೇ ನಮ್ಮ ಸರ್ಕಾರದ ದೃಷ್ಟಿ ಹೋಗಬೇಕು. ಇದನ್ನು ಸಾಧಿಸಬೇಕಾದರೆ, ಸಂಸ್ಥಾನದಲ್ಲಿರುವ ವಿವಿಧ ಕೋಮುಗಳ ವಿದ್ಯಾ ಪ್ರಗತಿ ಒಂದೇ ಮಟ್ಟದಲ್ಲಿದೆಯೇ, ಸಮಾಜದ ಮಟ್ಟದಲ್ಲಿ ಏರುಪೇರುಗಳಿವೆಯೇ ಎಂಬುದನ್ನು ಗಮನಿಸಿ ಇವುಗಳನ್ನೆಲ್ಲಾ ಒಂದೇ ಮಟ್ಟಕ್ಕೆ ಬರುವಂತೆ ಮಾಡುವುದೇ ಸರ್ವೋತ್ತಮವಾದುದು ಎಂದು ತಿಳಿಯಬೇಕು. ಈ ಸಭಾನಾಯಕರೂ ಹಣಕಾಸಿನ ಸಚಿವರೂ ಮತ್ತು ವಿದ್ಯಾ ಸಚಿವರೂ ಆಗಿರುವ ಮಾನ್ಯ ಸಚಿವರ ಮುಂದೆ ಒಂದು ರಚನಾತ್ಮಕ ಸಲಹೆಯನ್ನಿಡಲು ಇಚ್ಛಿಸುತ್ತೇನೆ. ನಿಮ್ನ ವರ್ಗದವರ ವಿಚಾರದಲ್ಲಿ ಒಂದು ಉದಾರನೀತಿಯನ್ನು ಎಲ್ಲ ವಿಚಾರಗಳಲ್ಲಿಯೂ—ವಿದ್ಯಾ ಸೌಕರ್ಯ, ಉಚಿತ ವಿದ್ಯಾಭ್ಯಾಸ, ಉಚಿತ ಹಾಸ್ಟೆಲ್ ಸೌಕರ್ಯ, ಹೆಚ್ಚು ಸ್ಕಾಲರ್‌ಷಿಪ್ ಹಂಚಿಕೆ—ಇತ್ಯಾದಿಗಳಲ್ಲಿ ಸರ್ಕಾರದವರು ಅನುಸರಿಸಲು ಸಿದ್ಧವಾಗಿದ್ದಾರೆಂದು ಧೈರ್ಯವಾಗಿ ಹೇಳಬೇಕು. ಹಿಂದೆ ಒಂದು ಬಾರಿ ನಮ್ಮ ಮುಖ್ಯ ಮಂತ್ರಿಗಳು ಮೈಸೂರು ಧ್ವಜದ ವಿಚಾರದಲ್ಲಿ ಯಾವ ರೀತಿ ಒಂದು ಧೈರ್ಯಯುತವಾಗಿ ವರ್ತಿಸಿದ್ದರೋ ಅದೇ ರೀತಿಯಾಗಿ..................

A VOICE.—How is this relevant to the subject matter under discussion, Sir?

ಶ್ರೀ ಎಂ. ಮಾದಯ್ಯ.—ಅದೇ ರೀತಿಯ ದೃಢ ಪ್ರತಿಜ್ಞೆಯ ಮನೋಭಾವವನ್ನು ನಿಮ್ನ ವರ್ಗದವರ ವಿಚಾರದಲ್ಲಿ ವಿದ್ಯಾ ಮಂತ್ರಿಗಳು ತಾಳಬೇಕು. ಅವರಿಗೇನೋ ಈ ಹರಿಜನೋದ್ಧಾರ ಕಾರ್ಯದಲ್ಲಿ ಸಹಾನುಭೂತಿ ಇದೆ ಅವರ ನೀತಿಯಿಂದ ಈ ಹರಿಜನೋದ್ಧಾರ ಕಾರ್ಯಕ್ಕೆ ಒಂದು ಹುರುಪು ಕೊಟ್ಟಂತಾಗಬೇಕು. ಈ ನನ್ನ ಸಲಹೆಗೆ ಮಾನ್ಯತೆ ಕೊಟ್ಟು ನಿಮ್ನ ವರ್ಗದ ಪ್ರಗತಿಗೆ ಒಂದು ಮಾರ್ಗವನ್ನು ಅವರು ಕಲ್ಪಿಸಿಕೊಡುತ್ತಾರೆಂದು ಭಾವಿಸಿದ್ದೇನೆ.

ಇನ್ನೊಂದು ಮುಖ್ಯವಾದ ವಿಚಾರವೇನೆಂದರೆ, 100 ಜನ ಬಡವರ ಮಕ್ಕಳು ಯೂನಿವರ್ಸಿಟಿಗೆ ಬಂದರೆ 500 ಜನ ಬಲ್ಲಿದವರ ಮಕ್ಕಳು ಬರುತ್ತಾರೆ. ಈ ವರ್ಷ 200 ಜನ ಬಡವರ ಮಕ್ಕಳು ವಿದ್ಯಾವಂತರಾದರೆ ಮುಂದಿನ ವರ್ಷ 1 000 ಜನ ಬಲ್ಲಿದವರ ಮಕ್ಕಳು ವಿದ್ಯಾವಂತರಾಗುತ್ತಾರೆ. ಈ ರೀತಿ ಬಡವರು ಬಡವರೇ, ಬಲ್ಲಿದವರು ಬಲ್ಲಿದವರೇ, ಆಗುತ್ತಾರೆ. ಅಂತರ ಇದ್ದೇ ಇರುತ್ತದೆ. ಇದು ಬಹು ಮಟ್ಟಿಗೆ ನಿಮ್ನ ತರಗತಿಯವರ ವಿಚಾರದಲ್ಲಿ ಅನ್ಯಾಯವಾಗುತ್ತದೆ. ಇದಕ್ಕೆ ವಿದ್ಯಾಭ್ಯಾಸದ ಇಲಾಖೆಯವರು, ಮಂತ್ರಿಗಳು, ಸರ್ಕಾರದವರು ಗಮನಕೊಟ್ಟು forward section ಯಾವುದಿದೆಯೋ ಅದರ ವಿಷಯದಲ್ಲಿ irrespective of caste and creed ಎಂಬ ನೀತಿಯನ್ನನುಸರಿಸದೆ, ನಿಮ್ನ ತರಗತಿಯವರ ಪ್ರಗತಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಇಲ್ಲದಿದ್ದ ಪಕ್ಷದಲ್ಲಿ ಖಂಡಿತವಾಗಿಯೂ ಅವರಿಗೆ ಹೆಚ್ಚಿನ ರೀತಿಯ ಸಹಾಯವಾಗುವುದಿಲ್ಲ ಎಂಬುದನ್ನು ಗಮನಿಸಬೇಕು. ಯಾರು ನಿಜವಾಗಿಯೂ ಬಡವರೋ ಅವರ ಪ್ರಗತಿ ಆಗುತ್ತಾ ಇಲ್ಲ. ನಿಮ್ನ ತರಗತಿಯವರಿಗೆ ಹೆಚ್ಚು ಹೆಚ್ಚು ಸೌಲಭ್ಯ ಒದಗಿಸಿ ಕೊಡುವ ವಿಚಾರದಲ್ಲಿ ತಾವು ಅವರನ್ನು ಕರುಣಾ ಜನಕ ದೃಷ್ಟಿಯಿಂದ ನೋಡಿ ಸಹಕಾರ ನೀಡದೇ ಇದ್ದರೆ ಬಡವ ಬಡವನೇ, ಬಲ್ಲಿದವನು ಬಲ್ಲಿದವನೇ ಆಗುವುದರಲ್ಲಿ ಸಂಶಯವಿಲ್ಲ.

12 NOON.

Mr. SPEAKER.—Cut motion moved :—

"That the demand be reduced by Rs. 100".

The Hon'ble Member does not think of speaking about the hostel facilities and purchase books mentioned in the cut motion, but goes on repeating sentences. I cannot allow him.

Sri M. LINGANNA.—I am suggesting, Sir, so far as cut motions are concerned . . . .

Mr. SPEAKER.—There is no agreement on that. Please sit down. I have asked Sri Chiklingiah to speak.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀಮಾನ್ ಮಾದಯ್ಯನವರು ತಂದಿರತಕ್ಕ ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತಾ ಒಂದೆರಡು ವಿಷಯಗಳನ್ನು ಮಾತ್ರ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ನಮ್ಮ ಮೈಸೂರು ಸರ್ಕಾರದವರು ನಿಮ್ನ ತರಗತಿಯವರ ವಿಚಾರದಲ್ಲಿ ಸಾಕಾದಷ್ಟು ಉತ್ತೇಜನ ಕೊಡುತ್ತಾ ಇದ್ದಾರೆ ಎಂಬ ವಿಷಯವನ್ನು ಹೇಳದೇ ಇದ್ದರೆ ವಿಧಿ ಇಲ್ಲ. ಏಕೆಂದರೆ ಪ್ರತಿಯೊಂದನ್ನೂ ವಿರೋಧಿಸುವುದು ತತ್ವವಲ್ಲ. ಇರತಕ್ಕ ವಿಷಯವನ್ನು, ವಾಸ್ತವಾಂಶವನ್ನು ಒಪ್ಪಿಕೊಳ್ಳಬೇಕಾದ್ದು ಸಹಜ.

Mr. SPEAKER.—Please mention points.

ಶ್ರೀ ಎಂ. ಚಿಕ್ಕಲಿಂಗಯ್ಯ.—ವಿದ್ಯಾಭ್ಯಾಸದ ವಿಚಾರದಲ್ಲಿ ನಮ್ಮ ಮುಂದೆ ಈಗಾಗಲೇ ಸುಧಾರಣೆಗಳನ್ನು ಇಡುತ್ತಾ ಇದ್ದೀರಿ, ಆ ವಿಚಾರದಲ್ಲಿ ನಾನು ಮೊದಲೇ ಸರ್ಕಾರದವರಿಗೆ ಸೂಚನೆಕೊಟ್ಟ ಹಾಗೆ ನಿಮ್ನ ತರಗತಿಯವರ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಯಾವ ರೀತಿ ಮಾಡಬೇಕು, ಅದನ್ನು ಪ್ರತ್ಯೇಕವಾಗಿ ಪರಿಶೀಲಿಸಿದ್ದೀರಾ ಎಂಬ ವಿಷಯ ಗೊತ್ತಿಲ್ಲ. Disparity ಇಲ್ಲದ ಹಾಗೆ ಘನ ಸರ್ಕಾರದವರು ನೋಡಿಕೊಳ್ಳಬೇಕು, ಏಕೆಂದರೆ ಈ ಜನಾಂಗ ಅಪಾರವಾದ ಜನಾಂಗ, ಬಹಳ ಬಡತನದಿಂದ ಇರತಕ್ಕ ಜನಾಂಗ. ಆದಿಕರ್ಣಾಟಕ ಜನಾಂಗದವರು ಪ್ರೈಮರಿ ವಿದ್ಯಾಭ್ಯಾಸಮಾಡಬೇಕಾದರೆ ಎಷ್ಟೋ ಕಷ್ಟ ಪರಿಸ್ಥಿತಿ ಇದೆ. ಪಾಠಶಾಲೆಗಳನ್ನು ಅವರಿಗಾಗಿ ಹೆಚ್ಚಾಗಿ ತೆರೆಯಲು ಸಾಧ್ಯವಿಲ್ಲ, ಹೀಗಾಗಿ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾಭ್ಯಾಸ ಕೊಡಲಿಕ್ಕೆ ಸಾಧ್ಯವಿಲ್ಲ. ಮುಂದುವರಿದ ಜನಾಂಗದವರೇ ಶೇಕಡ 60-70 ಭಾಗ ದೊಡ್ಡ ದೊಡ್ಡ ಡಿಗ್ರಿಗಳನ್ನು ಪಡೆಯುವುದಕ್ಕೆ ಅನುಕೂಲ ಹೊಂದುತ್ತಾ ಇದ್ದಾರೆ. ಆ ದೃಷ್ಟಿಯಿಂದ ಹೇಳುವು

(ಶ್ರೀ ಎಂ. ಚಿಕ್ಕಲಿಂಗಯ್ಯ.)

ದಾದರೆ, ನಿಮ್ನ ತರಗತಿಯವರು ಪ್ರೈಮರಿ ಮತ್ತು ಮಿಡ್ಲ್‌ಸ್ಕೂಲ್ ವಿದ್ಯಾಭ್ಯಾಸ ಪಡೆಯುವುದೂ ಕೂಡ ಕಷ್ಟವಾಗಿದೆ. ಹೀಗಿರುವಾಗ ಹೈಸ್ಕೂಲು ಮತ್ತು ಕಾಲೇಜು ವಿದ್ಯಾಭ್ಯಾಸ ಮಾಡುವ ಸ್ಥಿತಿಗೆ ಬರಬೇಕಾದರೆ ಅವರ ಆರ್ಥಿಕ ಸ್ಥಿತಿ ಏನಿದೆ; ಅವರ ಮಟ್ಟ ಎಲ್ಲಿದೆ ಎಂಬ ಒಂದು ತತ್ವವನ್ನು ಮೂಲಾಧಾರವಾಗಿಟ್ಟುಕೊಂಡು ಸರ್ಕಾರದವರು ಈ ವಿಷಯದಲ್ಲಿ ಹೆಚ್ಚು ಪ್ರೋತ್ಸಾಹ ಕೊಡಬೇಕೆಂಬುದೇ ನನ್ನ ಮನವಿ.

ಇನ್ನೊಂದು ವಿಚಾರವನ್ನು ನಾನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಇದಕ್ಕೆ ಒಂದು ತತ್ವ ದೃಷ್ಟಿಯಿಂದ ನಿರ್ದಿಷ್ಟವಾದ ಕಾಲದವರೆಗೂ ಈ ಸೌಕರ್ಯ ಏರ್ಪಡಿಸಿಕೊಡಬೇಕೆಂದು ಹೇಳಿ, ಈ ಖೋತಾ ನಿರ್ಣಯವನ್ನು ಒತ್ತಾಯ ಪೂರ್ವಕವಾಗಿ ಸಮರ್ಥನೆಮಾಡುತ್ತೇನೆ.

Mr. SPEAKER.—Sri Linganna wanted to say something.

Sri M. LINGANNA (Nanjangud).—Sir, so far as cut motions are concerned, I submit there are innumerable cut motions under the Education Head. If I may be permitted to submit, Sir, I would suggest that those who are willing to move the cut motions standing in their names may be allowed to do so and then all such cut motions along with the Demand may be taken up together and thrown open for discussion before the House. Probably that is the practice adopted in the Parliament also and that is the shortest method of giving chance for the largest number of speakers. That is what I want to submit for the consideration of the Chair, but it is left to the Chair to take a decision.

Mr. SPEAKER.—Just this morning it was discussed by the Leader of the Opposition and was replied to by the Leader of the House. I have given my ruling also. In view of that, it is left to the Hon'ble Members to come to some concrete formula. That is all.

Sri A. G. RAMACHANDRA RAO (Minister for Law and Education).—Sir, the cut motion is in regard to giving adequate number of depressed class scholarships to the scheduled caste students studying in high schools and the other cut motion includes University Intitutions also. Regarding this matter, I may be permitted to give some figures. To students studying in high schools and colleges belonging to depressed classes, there is no school fee. They are all free. Ninety-nine per cent of the students studying in the University, they get scholarships also. It is a very small number that do not get it, that is, in the collegiate stage. Regarding the high schools, in addition to freeships, 525 scholarships are given to these students at a cost of Rs. 42,525.

ಶ್ರೀ ಟಿ. ಎಚ್. ಮೂಡಲಗಿರಿಗೌಡರು (ಕುಣಿಗಲು).—ಶ್ರೀ ಚನ್ನಿಗರಾಮಯ್ಯನವರು ಮತ್ತು ಚೆನ್ನಯ್ಯನವರ ಮಕ್ಕಳಿಗೂ fees ಇಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಓದತಕ್ಕ ಎಲ್ಲ ಡಿಪ್ರೆಸ್ಡ್ ಕ್ಲಾಸ್ ವಿದ್ಯಾರ್ಥಿಗಳಿಗೂ ಕೂಡ ಫ್ರೀಷಿಪ್. ಎರಡನೆಯದಾಗಿ ಕಾಲೇಜಿನಲ್ಲಿ ಓದತಕ್ಕ ಡಿಪ್ರೆಸ್ಡ್ ಕ್ಲಾಸ್ ವಿದ್ಯಾರ್ಥಿಗಳಲ್ಲಿ ಬಹು ಭಾಗದವರಿಗೆ ಸ್ಕಾಲರ್‌ಷಿಪ್.........

ಶ್ರೀ ಎಂ. ಮಾದಯ್ಯ.—ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡತಕ್ಕ ನಿಮ್ನ ತರಗತಿಯವರಿಗೆ ತಾವು ಕೊಡತಕ್ಕ ಸ್ಕಾಲರ್‌ಷಿಪ್ ಒಂದೂ ಕಾಲು ಭಾಗದವರಿಗೂ ಕೂಡ ಸಾಕಾಗುವುದಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾವ್.—ಫ್ರೀಷಿಪ್ ಎಲ್ಲರಿಗೂ ಇದೆ. ಕಾಲೇಜಿನಲ್ಲಿ ಬಹು ಭಾಗದ ಹುಡುಗರಿಗೆ ಸ್ಕಾಲರ್‌ಷಿಪ್ ಉಂಟು. ಹೈಸ್ಕೂಲಿನಲ್ಲಿ ಓದತಕ್ಕ ವಿದ್ಯಾರ್ಥಿಗಳ ಪೈಕಿ 525 ಜನಕ್ಕೆ ಸ್ಕಾಲರ್‌ಷಿಪ್ ಕೊಡುತ್ತಾ ಇದೆ; 42 5 5 ರೂಪಾಯಿ ಖರ್ಚಾಗುತ್ತಾ ಇದೆ. ಇದರ ಜೊತೆಗೆ, ಅನೇಕರಿಗೆ ಬಟ್ಟೆ ಇಲ್ಲ ಎಂದು ಹೇಳಿದ್ದರಿಂದ, ಅದಕ್ಕಾಗಿ 3,000 ರೂಪಾಯಿ ಮತ್ತು ಪುಸ್ತಕಗಳಿಗಾಗಿ 7,000 ರೂಪಾಯಿ ಕೊಡುತ್ತಾ ಇದೆ. ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಡಿಪ್ರೆಸ್ಡ್ ಕ್ಲಾಸ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ಪಿಗಾಗಿ 1½ ಲಕ್ಷ ರೂಪಾಯಿ ವಿನಿಯೋಗವಾಗುತ್ತಾ ಇದೆ.

Sri L. SIDDAPPA (Channagiri).—What is the percentage of scholarship holders to the total number of scheduled caste students in the high school classes?

Sri A. G. RAMACHANDRA RAO.—That percentage is not here. I shall give that also.

ಎರಡನೆಯ ವಿಷಯವೇನೆಂದರೆ, ಸಾಮಾನ್ಯವಾಗಿ ಎಲ್ಲಾ ವಿದ್ಯಾ ಸಂಸ್ಥೆಗಳಲ್ಲೂ ಕೂಡ ಶೇಕಡ 20ರಷ್ಟು ಸ್ಕಾಲರ್‌ಷಿಪ್ ಕೊಟ್ಟಿದ್ದಾರೆ. ಆದರೆ ಇಲ್ಲಿ ಸೆಂಟ್ ಪರ್ಸೆಂಟ್ ಫ್ರೀಷಿಪ್ ಇದೆ ಎಂಬುದನ್ನು ತಿಳಿದುಕೊಳ್ಳಬೇಕು. ಈ ರೀತಿ ಅಂಶಗಳಿಂದ ಯಾವ ರೀತಿ ಇದೆ ಎಂಬುದನ್ನು ತಾವೇ ನೋಡಬಹುದು. It is for the House to draw the inference ಇಷ್ಟಕ್ಕೆ ಸರ್ಕಾರದವರು ತೃಪ್ತರಾಗಿಲ್ಲ. ಇನ್ನು ಹೆಚ್ಚು ಅನುಕೂಲ ಕಲ್ಪಿಸಿಕೊಡಬೇಕೆಂದು ಇದ್ದಾರೆ. ಸಾಮಾನ್ಯವಾಗಿ ಹಣಕಾಸಿನ ಮುಗ್ಗಟ್ಟು ಇರುವು

ದರಿಂದ, ಎಲ್ಲಾ ಇಲಾಖೆಗಳಲ್ಲಿ ಖೋತಾ ಮಾಡಿದರೂ ಕೂಡ ವಿದ್ಯಾಭ್ಯಾಸದ ಇಲಾಖೆಯಲ್ಲಿ ಖೋತಾವಾಡಿಲ್ಲ. ಇದರ ಜೊತೆಗೆ ಇನ್ನು ಸ್ವಲ್ಪ ಹೆಚ್ಚು ಖರ್ಚು ಮಾಡ ಬೇಕೆಂಬ ದೃಷ್ಟಿಯಿಂದ ಬಡ್ಜೆಟ್ಟಿನಲ್ಲಿ ಹಣ ಒದಗಿಸ ಲಾಗಿದೆ. ಸರ್ಕಾರದವರು ಶಕ್ತಿಮೀರಿ ಫ್ರೀಷಿಪ್, ಸ್ಕಾಲರ್‌ಷಿಪ್ ಕೊಟ್ಟು ಸಹಾಯ ಮಾಡುತ್ತಿರುವಾಗ ಯಾರದೂ ಆಕ್ಷೇಪಣೆ ಬರಲಾರದೆಂದು ನಂಬಿದ್ದೇನೆ.

ಇದರಲ್ಲಿ ಒಂದು ಮುಖ್ಯಾಂಶ ತಾವು ಏನು ತಿಳಿದು ಕೊಳ್ಳಬೇಕಾಗಿರುತ್ತದೆಂದರೆ : ಆರ್ಥಿಕ ಸ್ಥಿತಿಗಳನ್ನೂ, ಯಾರಿಗೆ ಹೆಚ್ಚಿನ ಅಗತ್ಯವಿರುತ್ತದೆಂಬುದನ್ನೂ, ಎರಡನ್ನೂ ಪರಿಶೀಲನೆ ಮಾಡಬೇಕಾಗಿರುತ್ತೆಂಬುದನ್ನೂ ಮರೆಯಬಾರದು. ನಮ್ಮಲ್ಲಿ 100 ಜನರಿಗೆ 5 ಜನ ಧನಿಕರಿದ್ದಾರೆ, ಶೇಕಡ 15ರಷ್ಟು ಮಧ್ಯಮ ತರಗತಿಯವರಿದ್ದಾರೆ. ಇನ್ನುಳಿಯುತಕ್ಕ ಶೇಕಡ 80 ರಷ್ಟು ಜನರೆಲ್ಲಾ ಬಡವರೇ. ದೇಶದಲ್ಲಿ ಬಡತನ ಎಂದಿನವರೆಗೆ ಕಡಮೆಯಾಗುವುದಿಲ್ಲವೋ ಮತ್ತು ಎಂದಿನವರೆಗೆ ದೇಶದ ವರಮಾನ ಹೆಚ್ಚಾಗುವುದಿಲ್ಲವೋ ಅಲ್ಲಿಯವರೆಗೂ ಈ ಕಷ್ಟಗಳು ನಮಗೆ ಇದ್ದೇ ಇರುತ್ತವೆ. ತಾವು ಆದಾಯದ ಬಾಬುಗಳನ್ನು ತೋರಿಸಿದರೆ, ಅವನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸರ್ಕಾರದವರು ಸದಾ ಸಿದ್ಧವಾಗಿದ್ದಾರೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಈಗ ಸೆಂಟರಿನವರು ಬೇರೆ ಸ್ಕಾಲರ್‌ಷಿಪ್ಪುಗಳನ್ನು ಕೊಡುತ್ತಿದ್ದಾರೆ. ಇವರಿಗೆ ಈ ಮೊದಲು ಮೈಸೂರು ಸರ್ಕಾರದವರೂ ಸ್ಕಾಲರ್‌ಷಿಪ್ ಕೊಡುತ್ತಿದ್ದರು. ಆದರೆ ಸೆಂಟರಿನವರು ಹೆಚ್ಚು ಹೆಚ್ಚಾಗಿ ಸ್ಕಾಲರ್‌ಷಿಪ್ಪುಗಳನ್ನು ಕೊಡುತ್ತಿರುವಾಗ ಅದೇ ದಾಮಾಷಾದಲ್ಲಿ ನಮ್ಮ ಸರ್ಕಾರದವರೂ ಈ ಸ್ಕಾಲರ್‌ಷಿಪ್ಪುಗಳನ್ನು ಹೆಚ್ಚಿಸುವುದಕ್ಕೆ ಬದಲಾಗಿ, ಕೇಂದ್ರದ ಸ್ಕಾಲರ್‌ಷಿಪ್ಪುಗಳು ಹೆಚ್ಚಾಗಿ ಮಾಡಲ್ಪಟ್ಟಿವೆಯೆಂದು ಮೈಸೂರು ಸರ್ಕಾರದವರು ಕೊಡುತ್ತಿದ್ದ ಸ್ಕಾಲರ್‌ಷಿಪ್ಪುಗಳೆಲ್ಲ ಲ್ಯಾಪ್ಸ್ ಆಗಿರುತ್ತವಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೇಂದ್ರ ಸರ್ಕಾರದವರೂ ಸ್ಕಾಲರ್‌ಷಿಪ್ಪುಗಳನ್ನು ಕೊಡುತ್ತಾರೆ. ಅದನ್ನು ಪರರಾಷ್ಟ್ರಗಳಿಗೆ ಅಭ್ಯಾಸಕ್ಕಾಗಿ ಹೋಗತಕ್ಕ ವಿದ್ಯಾರ್ಥಿಗಳಿಗೆ ಕೊಡಲಾಗುತ್ತದೆ. ಹಾಗೆ ಹೊರಗಡೆ ಹೋಗತಕ್ಕ ವಿದ್ಯಾರ್ಥಿಗಳಿಗೆ ನಮ್ಮ ಸರ್ಕಾರದಿಂದಲೂ ಸ್ಕಾಲರ್‌ಷಿಪ್‌ಗಳನ್ನು ಕೊಟ್ಟಿದ್ದೇವೆ. ಹಾಗೆ ಕಡಮೆ ಮಾಡಬೇಕೆಂಬ ಇರಾದೆ ಸರ್ಕಾರಕ್ಕೆ ಎಂದಿಗೂ ಇಲ್ಲ. ಆದರೆ ಒಬ್ಬನೇ ವಿದ್ಯಾರ್ಥಿಗೆ ಎರಡು ಕಡೆಗಳಿಂದ ಸ್ಕಾಲರ್‌ಷಿಪ್ ಕೊಡುವುದರಲ್ಲಿ ಅರ್ಥವಿಲ್ಲ.

ಶ್ರೀ ಎಂ. ಮಾದಯ್ಯ.—ಈ ಎಜುಕೇಷನ್ ಬಾಬಿಗೆ ಕಳೆದ ಸಾಲಿಗಿಂತಲೂ ಈ ಸಲದ ಬಡ್ಜೆಟ್ಟಿನಲ್ಲಿ ತಾವು ಹೆಚ್ಚಿಗೆ ಮೊಬಲಗನ್ನೇನೋ ಒದಗಿಸಿದ್ದೀರಿ. ಆದರೆ ನಮ್ಮ ನಿಮ್ನ ತರಗತಿಗಳವರಿಗೆ ಒದಗಿಸಿರುವುದು ಬಹಳ ಕಡಮೆಯಾಗಿರಲು ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಭ್ಯಾಸಮಾಡತಕ್ಕ ವಿದ್ಯಾರ್ಥಿಗಳಲ್ಲಿ ಶೇಕಡ 80 ರಷ್ಟು ಬಡವರಿರತಕ್ಕದ್ದೇ ಅದಕ್ಕೆ ಕಾರಣವೆಂದು ತಾವು ತಿಳಿದುಕೊಳ್ಳಬೇಕು.

Mr. SPEAKER.—What does the mover of the cut motion say ? Is he pressing the cut motion or withdrawing it ?

Sri M. MADIAH.—I seek the permission of the House to withdraw the cut motion.

The cut motion was, by leave, withdrawn.

Unsatisfactory work in the Education Department.

ಶ್ರೀ ಆರ್. ಅನಂತರಾಮು (ಚಾಮರಾಜಪೇಟೆ).—ಸ್ವಾಮಿ ನನ್ನ ಖೋತಾ ಸೂಚನೆಯು ಈ ರೀತಿಯಾಗಿದೆ ಅದನ್ನು ಮಂಡಿಸುತ್ತೇನೆ.—

"ವಿದ್ಯಾಭ್ಯಾಸದ ಇಲಾಖೆಯಲ್ಲಿ ಕೆಲಸವು ತೃಪ್ತಿಕರವಾಗಿ ನಡೆಯುತ್ತಿಲ್ಲವೆಂಬ ವಿಚಾರವಾಗಿ ಚರ್ಚೆಮಾಡುವುದಕ್ಕಾಗಿ "37 ವಿದ್ಯಾಭ್ಯಾಸ" ಎಂಬ ಬಾಬಿನಲ್ಲಿ ಕೋರಿರತಕ್ಕ 3,57,46,000 ರೂಪಾಯಿಗಳ 'ಡಿಮ್ಯಾಂಡ್' ಮನವಿಯು ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆಮಾಡಬೇಕು."

ಅಧ್ಯಕ್ಷರೇ ನಾವು ಈ ವರ್ಷದ ಬಡ್ಜೆಟ್ಟನ್ನೂ ಮತ್ತು 1946-47 ನೆಯ ಇಸವಿಯ ಬಡ್ಜೆಟ್ಟನ್ನೂ ಎರಡನ್ನೂ ಹೋಲಿಸಿನೋಡಿದರೆ ಈ ವಿದ್ಯಾಭ್ಯಾಸದ ಬಾಬಿನಲ್ಲಿ 138 ಲಕ್ಷ ಖರ್ಚುಮಾಡುತ್ತಿದ್ದ ಕಡೆಯಲ್ಲಿ ಕಳೆದ ಮೂರು ವರ್ಷಗಳಿಂದಲೂ 377 ಲಕ್ಷ ಚಿಲ್ಲರೆಯನ್ನು ಖರ್ಚುಮಾಡುತ್ತಿರುವುದಕ್ಕಾಗಿ ನಾವು ನಮ್ಮ ಸರ್ಕಾರವನ್ನು ಎಷ್ಟು ಹೊಗಳಿದರೂ ಸಾಲದಾಗಿದೆ. ಆದರೆ ಇಷ್ಟೊಂದು ಭಾರಿ ಮೊಬಲಗನ್ನು ಖರ್ಚುಮಾಡುತ್ತಿರುವಾಗ ವಿದ್ಯಾಭ್ಯಾಸದಲ್ಲಿ ಏನಾದರೂ ಅನುಕೂಲವಾಗುತ್ತಿದೆಯೆ ಅಥವಾ ಇಲ್ಲವೆ, ಎಂಬುದನ್ನು ನಾವೀಗ ನೋಡಬೇಕಾಗಿದೆ.

ಮೊದಲನೆಯದಾಗಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ತೆಗೆದುಕೊಳ್ಳೋಣ. ಪ್ರತಿಯೊಂದು ಹಳ್ಳಿಯಲ್ಲೂ ಒಂದೊಂದು ಪಾಠಶಾಲೆಯನ್ನೇನೋ ಕಟ್ಟಿದ್ದಾರೆ. ಆದರೆ ಆ ಪಾಠಶಾಲೆಯಲ್ಲಿ 50 ಹುಡುಗರು ಇರುವಕಡೆ 10 ವಿದ್ಯಾರ್ಥಿಗಳು ಸಹ ಇರುವುದು ಕಂಡುಬರುವುದಿಲ್ಲ. ಕಾರಣ ಬಲವಂತ ಶಿಕ್ಷಣ ಎಷ್ಟೋ ಕಡೆ ಜಾರಿಯಲ್ಲಿಲ್ಲದಿರುವುದೇ ಆಗಿರುತ್ತದೆ. ಇದರ ಜೊತೆಗೆ ಉಪಾಧ್ಯಾಯರು ಕೂಡ ಕಾಲಕ್ಕೆ ಸರಿಯಾಗಿಹೋಗಿ ಶಾಲೆಗಳ ಬಾಗಿಲನ್ನು ತೆಗೆಯುತ್ತಿಲ್ಲ. ಕಾರಣ, ಅವರಿಗೆ ಕೊಡುತ್ತಿರುವ ಸಂಬಳ ಸಾರಿಗೆಗಳು ಕಡಮೆಯಾಗಿದ್ದು ಅವರಲ್ಲಿ ಅತೃಪ್ತಿ ಅಸಮಾಧಾನಗಳು ಮೂಡಿವೆ. ಅದಕ್ಕಾಗಿ ಅವರು ಪತ್ರ ಬರೆಯುವುದು, ಇಲ್ಲವೇ ಪಟ್ಟಣಗಳಿಗೆ ಬಂದು ಬೇರೆ ವೃತ್ತಿಗಳನ್ನು ಕೈಕೊಳ್ಳುವುದಕ್ಕೆ ಅವಕಾಶವಾಗಿದೆ. ಇಂಥ ಲೋಪದೋಷಗಳಿಗೆ ಅವಕಾಶ ಕೊಡದಂತೆ ಕಾಲಕಾಲಕ್ಕೆ ಸರಿಯಾಗಿ ಪಾಠಶಾಲೆಗಳನ್ನು ಇನ್ಸ್‌ಪೆಕ್ಟ್ ಮಾಡಲು ನೇಮಕವಾಗಿರತಕ್ಕ ಇನ್ಸ್‌ಪೆಕ್ಟರುಗಳು ಸರಿಯಾಗಿ ತನಿಖೆಯನ್ನೂ ಕೂಡ ಮಾಡುತ್ತಿಲ್ಲ. ಹೀಗೆ ನಾವು ಹಣವನ್ನೇನೋ ಅಪಾರವಾಗಿ ಖರ್ಚು ಮಾಡುತ್ತಿದ್ದಾಗ್ಯೂ ಇದರಿಂದ ಅಷ್ಟೇನೂ ಉತ್ತಮ ಫಲಿತಾಂಶವಾದಂತೆ ಕಂಡುಬರುತ್ತಿಲ್ಲವೆಂಬ ವಿಚಾರವನ್ನು ನಾನು ತಿಳಿಸಲು ಬಹಳ ವ್ಯಥೆಯುಂಟಾಗುತ್ತದೆ. ಈ ತೊಂದರೆಗಳನ್ನು ನೀಗಬೇಕಾಗಿದ್ದರೆ ತಾವು ಕೂಡಲೇ ಬಲವಂತ ಶಿಕ್ಷಣವನ್ನು ಜಾರಿಗೆತರಬೇಕು.

ಇನ್ನು ಎರಡನೆಯದಾಗಿ ಮಾಧ್ಯಮಿಕ ಮತ್ತು ಹೈಸ್ಕೂಲುಗಳ ವಿಚಾರ. ಈ ಹಂತದಲ್ಲಿ ನಡೆಯುವ ವಿದ್ಯಾಭ್ಯಾಸದಲ್ಲಿ ಕೂಡ ಏನೂ ಪ್ರಯೋಜನವಾದಂತೆ ಕಂಡುಬರುವುದಿಲ್ಲ. ಇಲ್ಲಿಯೂ ಸಹ ಉಪಾಧ್ಯಾಯರುಗಳಲ್ಲಿ ಅತೃಪ್ತಿ, ಅಸಮಾಧಾನಗಳು ಮೂಡಿರುತ್ತವೆ. ಕಾರಣ, ನಾನಾಗಲೇ ತಿಳಿಸಿರುವಂತೆ ಇವರಿಗೆ ಕೊಡ

(ಶ್ರೀ ಆರ್. ಅನಂತರಾಮನ್.)

ತಕ್ಕ ಸಂಬಳ ಸಾರಿಗೆಗಳು ಕಡಮೆ ಎಂಬುದು. ಈ ಒಂದು ಕಾರಣದ ಜೊತೆಗೆ, ಈ ಉಪಾಧ್ಯಾಯರುಗಳು ವಿಧ್ಯಾರ್ಥಿಗಳಿಗೆ ಅವರ ಮನೆಗಳಲ್ಲಿ ಪ್ರೈವೇಟ್ ಟ್ಯೂಷನ್ ಕೊಡಕೂಡದೆಂದು ಮಾಡಿರತಕ್ಕದ್ದು ಒಂದು ಕಾರಣವಾಗಿದೆ. ಕೆಲವು ಉಪಾಧ್ಯಾಯರು ತಿಂಗಳಲ್ಲಿ 5—6 ಪೀರಿಯಡ್‌ಗಳನ್ನೂ ಸ್ಕೂಲ್ ಫೀಜುವಸೂಲುಮಾಡಲು ಕಾಲ ಕಳೆಯುವರು. ಹೀಗೆ ನಾನಾ ಕಾರಣಗಳಿಂದ ಅನೇಕ ತರಗತಿಗಳಲ್ಲಿ ಪಾಠಗಳೇ ಸರಿಯಾಗಿ ಆಗಿರುವುದಿಲ್ಲ. ಹೀಗೆ ಪಾಠ ಹೇಳಿಕೊಡತಕ್ಕ ಉಪಾಧ್ಯಾಯರು ಫೀಜನ್ನು ವಸೂಲ್ಮಾಡತಕ್ಕ ಮುತ್ಸದ್ದಿಗಳಾಗಿ ಹೋಗಿದ್ದಾರೆ. ಈ ವಿಚಾರವನ್ನು ಒಂದು ಪಾಠಶಾಲೆಗೆ ಹೋಗಿ ನಾನೇ ಕಣ್ಣಾರ ನೋಡಿಕೊಂಡು ಬಂದಿರುತ್ತೇನೆ. ಆದರೆ ಹೀಗೆ ಈ ಫೀಜು ವಗೈರೆಗಳನ್ನು ವಸೂಲ್ಮಾಡುವುದು ಕೇವಲ ಗುಮಾಸ್ತರ ಬದುಕು. ಇದಕ್ಕಾಗಿ ಒಬ್ಬ ಗುಮಾಸ್ತೆಯನ್ನಾದರೂ ನೇಮಕಮಾಡಿ, ಈ ಉಪಾಧ್ಯಾಯರುಗಳು ಸರಿಯಾಗಿ ತಮ್ಮ ಕಾಲವನ್ನು ಪಾಠ ಹೇಳಲು ಉಪಯೋಗಿಸುವಂತೆ ಮಾಡಬೇಕೆಂದು ಸರ್ಕಾರದವರಿಗೆ ಒಂದು ಸೂಚನೆಕೊಡುತ್ತೇನೆ.

ಈ ವಿದ್ಯಾಭ್ಯಾಸ ಮುಂದುವರಿಯದೇ ಇರಲು ಇದಕ್ಕೆ ಇರತಕ್ಕ ಮತ್ತೊಂದು ತೊಂದರೆ ಏನೆಂದರೆ ಹೈಸ್ಕೂಲ್ ವಿಧ್ಯಾರ್ಥಿಗಳ ವೃಂದ ವಿಪರೀತ ಹೆಚ್ಚಾಗಿ ಹೋಗಿದೆ. ಆ ಹುಡುಗರನ್ನೆಲ್ಲಾ ಹತೋಟಿಗೆ ತೆಗೆದುಕೊಳ್ಳುವುದೇ ಉಪಾಧ್ಯಾಯರುಗಳಿಗೆ ಒಂದು ದೊಡ್ಡ ಕಷ್ಟವಾಗಿ ಹೋಗಿದೆ, ವಿದ್ಯಾರ್ಥಿಗಳಲ್ಲಾದರೋ ಅಶಿಸ್ತು ಹೆಚ್ಚಾಗಿದೆ. ಇಂಥ ಅಶಿಸ್ತಿನಿಂದ ಇರತಕ್ಕ ವಿದ್ಯಾರ್ಥಿಗಳಿಗೆ ಪಾಠ ಹೇಳುವುದು ತುಂಬಾ ಕಷ್ಟ. ಒಂದೊಂದು ತರಗತಿಯಲ್ಲೂ ವಿದ್ಯಾರ್ಥಿಗಳ ಸಂಖ್ಯೆ ನೂರಕ್ಕೆ ಮೇಲ್ಪಟ್ಟು ಇರುತ್ತದೆ. ಅಷ್ಟು ಜನ ವಿದ್ಯಾರ್ಥಿಗಳಿಗೆ ಪಾಠಹೇಳಲು ಹೇಗೆ ಸಾಧ್ಯ ? ಆ ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳುವಷ್ಟು ರೂಮುಗಳೂ ಕೂಡ ಇರುವುದಿಲ್ಲ. ಹೀಗೆ ಉಭಯತ್ರರಲ್ಲೂ ಎಂದರೆ ವಿದ್ಯಾರ್ಥಿಗಳಲ್ಲಿ ಅಶಿಸ್ತು ಉಪಾಧ್ಯಾಯರುಗಳಲ್ಲಿ ಅತೃಪ್ತಿ, ಅಸಮಾಧಾನಗಳೂ ತಲೆದೋರಿ ವಿದ್ಯಾಭ್ಯಾಸದ ಏಳಿಗೆಗೆ ಒಂದು ದೊಡ್ಡ ಪೆಟ್ಟು ಬಿದ್ದಿದೆ. ಹಿಂದಿನಕಾಲದಲ್ಲಿ ಉಪಾಧ್ಯಾಯರಿಗೂ, ಹುಡುಗರುಗಳಿಗೂ ಒಂದು ಮಧುರ ಬಾಂಧವ್ಯ ತಂದೆ ಮಕ್ಕಳ ಹಾಗೆ ಮತ್ತು ಗುರು ಶಿಷ್ಯರೋಪಾದಿಯಲ್ಲಿ, ಇರುತ್ತಿತ್ತು. ಈಗ ಆ ಬಾಂಧವ್ಯವೆಲ್ಲ ಮಾಯವಾಗುತ್ತ ಬಂದಿದೆ.

ಹುಡುಗರಿಗೆ ಎಂದರೆ ವಿಧ್ಯಾರ್ಥಿಗಳಿಗೆ ಏನಾದರೂ ಅಂಥ ತೊಂದರೆಗಳುಂಟಾದ ಸಂದರ್ಭದಲ್ಲಿ ವಿದ್ಯಾ ಖಾತೆಯ ಮೊಖ್ತೇಸರರಲ್ಲಿ, ಎಂದರೆ ಡಿ.ಪಿ.ಐ. ಅವರಲ್ಲಿ ಹೋಗಿ, ಅವರು ತಮ್ಮ ಕಷ್ಟ ಸುಖಗಳನ್ನು ತಿಳಿಸಲು ಉದ್ಯುಕ್ತರಾದಾಗ, ಅವರು, ಆ ವಿದ್ಯಾರ್ಥಿಗಳ ಮನವಿಯನ್ನು ಲಾಲಿಸಿ, ಅವರ ಕಷ್ಟ ಸುಖಗಳೇನೆಂಬುದನ್ನು ಪ್ರೀತಿಯಿಂದ ಅರಿತುಕೊಂಡು, ಅದಕ್ಕೆ ತಕ್ಕಪರಿಹಾರ ಕೊಡುತ್ತಿಲ್ಲ. ಅವರ ಕಷ್ಟ ಸುಖಗಳೇನೆಂಬುದನ್ನು ಕೇಳುವುದಕ್ಕೆ ಬದಲಾಗಿ ಅವರನ್ನು ಗದರಿಸಿ, ಬೆದರಿಸಿ ಕಳುಹಿಸುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳಲ್ಲಿ ತುಂಬ ಅಸಮಾಧಾನಉಂಟಾಗಿ ಎಲ್ಲಿನೋಡಿದರೂ ಸ್ಟ್ರೈಕುಗಳು, ಹರತಾಳಗಳು ಹೆಚ್ಚಾಗಿ ನಡೆಯುತ್ತಿರುವುದು ಕಂಡುಬರುತ್ತಿದೆ.

ಇನ್ನು ಕಾಲೇಜಿನ ವಿಚಾರವನ್ನಂತೂ ಕೇಳುವಹಾಗೇ ಇಲ್ಲ. ವಿದ್ಯಾರ್ಥಿಗಳಲ್ಲಿ ಬಹಳ ಅಶಿಸ್ತು ಇದ್ದು ಅಲ್ಲಿಯೂ ಉಪಾಧ್ಯಾಯರುಗಳಲ್ಲಿ ಅತೃಪ್ತಿ, ಅಸಮಾಧಾನಗಳು ಮೂಡಿರುತ್ತವೆ. ಇದಕ್ಕೆ ಮೊನ್ನೆತಾನೆ ಇಂಜಿನಿಯರಿಂಗ್ ಸ್ಕೂಲಿನಲ್ಲಿ ನಡೆದ ಸ್ಟ್ರೈಕನ್ನೇ ಒಂದು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಆ ಪಾಠಶಾಲೆಯ ವಿದ್ಯಾರ್ಥಿಗಳು ಡಿ.ಪಿ.ಐ ಅವರಲ್ಲಿ ಹೋಗಿ ತಮ್ಮ ಕಷ್ಟ ಸುಖಗಳನ್ನು ಹೇಳಿಕೊಳ್ಳಬೇಕೆಂದು ಪ್ರಯತ್ನಪಟ್ಟಾಗ ಅವರು ಇವರ ವಿಚಾರದಲ್ಲಿ ಬಹಳಕಟುವಾಗಿ ಮತ್ತು ಒರಟಾಗಿ ವರ್ತಿಸಿರುತ್ತಾರೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಹಾಗೆ ವರ್ತಿಸಿದವರು ಯಾರು ?

ಶ್ರೀ ಆರ್. ಅನಂತರಾಮನ್.—ಡಿ.ಪಿ.ಐ. ಮತ್ತು ವೈಸ್‌ಛಾನ್ಸಲರ್‌ರವರು. ಹಾಗೆ ಈ ಅಧಿಕಾರಿಗಳ ಬಳಿಗೆ ಯಾರಾದರೂ ತೊಂದರೆಗಳನ್ನು ಹೇಳಿಕೊಳ್ಳಲು ಹೋದಾಗ ಅವರು ವಿನಯದಿಂದ ವರ್ತಿಸಬೇಕಾದದ್ದು ಅವರ ಪ್ರಥಮಕರ್ತವ್ಯ. ಅವರು ವಿನಯದಿಂದ ಅವರ ಅಹವಾಲುಗಳನ್ನು ಕೇಳಿದರೆ ಯಾವ ತೊಂದರೆಯೂ ಬರುವುದಿಲ್ಲ. ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಅಸಮಾಧಾನ ಮತ್ತು ಅತೃಪ್ತಿಗಳು ಮೂಡುವಂತೆ ಮಾಡುವುದಕ್ಕೆ ಬದಲಾಗಿ, ಅವರನ್ನು ತಮ್ಮ ಮಕ್ಕಳೋಪಾದಿಯಲ್ಲಿ ಕರೆದು, ಕಂಡು, ಅವರ ತೊಂದರೆಗಳೇನೆಂಬುದನ್ನು ವಿಚಾರಿಸಿ, ಅವರಲ್ಲಿ ಒಂದು ಮಧುರ ಬಾಂಧವ್ಯ ಬೆಳೆಯುವಂತೆ ವರ್ತಿಸುವುದಕ್ಕೆ ಬದಲಾಗಿ ಅವರಲ್ಲಿ ಒರಟಾಗಿ ವರ್ತಿಸಿದರೆ ಅದರಿಂದಾಗುವ ಪರಿಣಾಮವೇನು ಎಂಬುದು ಎಲ್ಲರಿಗೂ ಗೊತ್ತೇ ಇದೆ.

ಅದೇ ವಿದ್ಯಾರ್ಥಿಗಳು ಮಾನ್ಯ ವಿದ್ಯಾಮಂತ್ರಿಗಳ ಬಳಿಗೆ ಹೋದಾಗ ಅವರೆಷ್ಟು ತೃಪ್ತಿ ಹೊಂದಿದರು! ಇದಕ್ಕೆಕಾರಣವಾದರೂ ಏನು? ಅವರನ್ನು ಮಾನ್ಯ ಮಂತ್ರಿಗಳು ಗೌರವದಿಂದ ನೋಡಿ ಅವರ ಕಷ್ಟ ಸುಖಗಳನ್ನು ಪ್ರೀತಿ ವಿಶ್ವಾಸ ಪೂರ್ವಕವಾಗಿ ಕೇಳಿ ಅದಕ್ಕೆ ತೃಪ್ತಿಕರವಾದ ಒಂದು ಸಮಾಧಾನ ನೀಡಿದ್ದೇ ಕಾರಣ. ಇಲಾಖಾ ಅಧಿಕಾರಿಗಳೂ ಸಹ ಹೀಗೆ ವರ್ತಿಸಬೇಕಾದ್ದು ಮುಖ್ಯ. ಆದರೆ ಹೀಗೆಮಾಡದೆ ಇರುವುದನ್ನು ನೋಡಿದರೆ ಹಿಂದೆ ಒಂದಾನೊಂದು ಕಾಲದಲ್ಲಿದ್ದ ಬ್ಯೂರಾಕ್ರೆಟಿಕ್ ನಡೆವಳಿಕೆಗಳು ಇನ್ನೂ ಹೋಗಿರುವುದಿಲ್ಲವೆಂದು ಅರ್ಥವಾಗುತ್ತದೆ. ಅವರು ಜನರ ಸೇವಕರೆಂಬುದನ್ನು ತಿಳಿದುಕೊಳ್ಳಬೇಕು. ಜಬರ್‌ದಸ್ತಿನಿಂದ ಇದ್ದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. "ಜನರಕಷ್ಟಸುಖಗಳನ್ನು ಪರಿಹರಿಸುವುದಕ್ಕಾಗಿಯೇ ನಾವುಗಳು ಈ ಅಧಿಕಾರ ಸ್ಥಾನದಲ್ಲಿದ್ದೇವೆಂಬುದನ್ನು" ಅವರು ತಿಳಿದುಕೊಳ್ಳದೆ ಬರೀ ಜಬರ್‌ದಸ್ತಿನಿಂದ ನಡೆಯುವುದು ಸರಿಯಾದ್ದಲ್ಲ.

ಅವರು ತಿಳಿದುಕೊಳ್ಳಬೇಕು, "ನಾವು ಸಮಾಜದ ಸೇವಕರು, ಜನರಿಗಾಗಿ ದುಡಿಯಲು ಇದ್ದೇವೆ" ಎಂಬುದನ್ನು. ಹಾಗಿಲ್ಲದೆ ಸುಮ್ಮನೆ ಹಿಂದಿನ ಕಾಲದಲ್ಲಿದ್ದಂತೆ ಜಬರ್‌ದಸ್ತಿನಿಂದಿದ್ದರೆ ಪ್ರಯೋಜನವಿಲ್ಲ. ಜನರಿಗಾಗಿ ಅವರು ದುಡಿಯುವಾಗ ಅವರ ಕಷ್ಟ ಸುಖಗಳನ್ನು ಕೇಳಿ ತಿಳಿದುಕೊಳ್ಳಬೇಕಾದದ್ದು ಅವರ ಕರ್ತವ್ಯ. ಅದಿಲ್ಲದಿದ್ದರೆ, ಅವರ ಜಬರ್ದಸ್ತಿಯನ್ನು ಯಾರು ಕೇಳುತ್ತಾರೆ. ಈಗಿನಕಾಲದಲ್ಲಿ ಗಂಡನೇ ಹೆಂಡತಿಯನ್ನು ಹಾಗೆ ಮಾತಾಡಿಸುವುದು ಕಷ್ಟ. ಆದ್ದರಿಂದ ಇಂಥಕಾಲದಲ್ಲಿ ಜಬರ್ದಸ್ತಿನಿಂದ ಯಾವ ಕೆಲಸವೂ ಆಗುವುದಿಲ್ಲವೆಂಬುದನ್ನು ಅವರು ಮುಖ್ಯವಾಗಿ ತಿಳಿದುಕೊಳ್ಳಬೇಕು. ಅವರು ಶಿಸ್ತನ್ನು ಪಾಲಿಸಬೇಕಾದರೆ ಮಕ್ಕಳನ್ನು ವಿನಯ ಪೂರ್ವಕವಾಗಿ ನೋಡಿಕೊಂಡು ಕೆಲಸಮಾಡಬೇಕಾದದ್ದು ಮುಖ್ಯ.

ಇನ್ನೊಂದು ವಿಷಯವೇನೆಂದರೆ, ಟೆಕ್ನಿಕಲ್ ಕಾಲೇಜುಗಳಲ್ಲಿ ಮತ್ತು ಸ್ಕೂಲುಗಳಲ್ಲಿ ಹುಡುಗರಿಗೆ ಪ್ರವೇಶ ಕೊಡುವಾಗ ಬಹಳ ಕಷ್ಟವಾಗಿದೆ. ಇದು ನಿಜವಾಗಿಯೂ ಬಹಳ ಚಿಕ್ಕ ವಿಷಯವೆಂದು ಭಾವಿಸಬಹುದು. ಇದಕ್ಕೊಂದು ಸಮಿತಿಯನ್ನು ಕೂಡ ತಾವು ರಚಿಸಿದ್ದೀರಿ, ಅದಕ್ಕೊಂದು ನಿಬಂಧನೆ ಬೇರೆ ಇದೆ. ನನಗೆ ತಿಳಿದ ಮಟ್ಟಿಗೆ, ಬಹಳ ಜನ ಹುಡುಗರಿಗೆ ಈಗ ಸ್ಥಳಸಿಕ್ಕದೆ ಅನೇಕರಿಗೆ ಜೀವನದಲ್ಲಿ ನಿರಾಶೆಯುಂಟಾಗಿದೆ. ಜೊತೆಗೆ ಆ ಸಮಿತಿಯೂ ಅಷ್ಟು ಸಮರ್ಪಕವಾಗಿ ಕೆಲಸ ನಡೆಸುತ್ತಿಲ್ಲವೆಂದು ತಿಳಿದುಬಂದಿದೆ.

ಇದಕ್ಕೆ ನನ್ನ ಒಂದು ಸಲಹೆಯೇನೆಂದರೆ, ಈ ಕಾಲೇಜುಗಳಲ್ಲಿ ಸ್ಥಳಾವಕಾಶವಿರುವುದು ಕಡಿಮೆಯೆಂಬುದನ್ನು ನಾನು ಒಪ್ಪುತ್ತೇನೆ ಆದರೂ ಆದಷ್ಟು ಹೆಚ್ಚು ವಿದ್ಯಾರ್ಥಿಗಳಿಗೆ ನಾವು ಅವಕಾಶ ಕೊಡಬೇಕಾದದ್ದು ನಮ್ಮ ಕರ್ತವ್ಯ. ಇದಕ್ಕಾಗಿ ಅಮೆರಿಕಾ ದೇಶದಲ್ಲಿ ಯಾವ ರೀತಿ shift system ಅನುಸರಿಸಿ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಿದ್ದಾರೋ ಆ ರೀತಿ ಇಲ್ಲಿಯೂ ಮಾಡಿ, ಒಂದೇ ಸ್ಕೂಲು ಇದ್ದರೂ ಅದು 24 ಘಂಟೆಯೂ ನಡೆಯುವಂತೆ ಮಾಡಿ, ಹೆಚ್ಚಿನ ಉಪಾಧ್ಯಾಯರುಗಳನ್ನಿಟ್ಟುಕೊಂಡು ವಿದ್ಯಾಭ್ಯಾಸವನ್ನು ನಡೆಸಬಹುದು. ಹೆಚ್ಚು ಸ್ಕೂಲುಗಳನ್ನು ತೆರೆಯುವುದಕ್ಕೆ ಹಣವಿಲ್ಲವೆಂದು ಹೇಳಬಹುದು. ಆದರೆ, ನಾನು ಹೇಳಿದಂತೆ, ಇರುವ ಸ್ಕೂಲುಗಳಲ್ಲೇ ಮೂರು ಷಿಫ್ಟ್‌ಗಳನ್ನು ಮಾಡಬೇಕೆಂದು ಹೇಳುತ್ತೇನೆ. ಹಾಗಿಲ್ಲದೆ, ಹುಡುಗರಿಗೆ ಸ್ಥಳವಿಲ್ಲ, ವಿದ್ಯಾಭ್ಯಾಸ ಕೊಡುವುದಕ್ಕಾಗುವುದಿಲ್ಲ ಎಂದರೆ ವರ್ಷದ ಆರಂಭದಲ್ಲೇ ಅವರಿಗೆ ಅತೃಪ್ತಿ ಉಂಟಾಗುತ್ತದೆ. ನ್ಯಾಯವಾಗಿ ವಿದ್ಯಾಭ್ಯಾಸವೆಲ್ಲಾ ಮುಗಿಸಿಕೊಂಡು ಮನೆಗೆ ಹೋಗಿ ಕೆಲಸ ಸಿಕ್ಕದೆ ಕೂತಿರುವಾಗ ಜೀವನದಲ್ಲಿ ಉಂಟಾಗುವ ನಿರಾಶೆ ಈಗಲೇ ಅವರಿಗಾದರೆ, ಇನ್ನು ವಿದ್ಯಾಭ್ಯಾಸ ಯಾವ ರೀತಿ ನಡೆಯುತ್ತದೆಂಬುದನ್ನು ನೀವೇ ಯೋಚನೆ ಮಾಡಿ. ಇಂಥ ಅತೃಪ್ತಿ, ನಿರಾಶೆಯುಂಟಾಗುವುದಕ್ಕೆ ಅವಕಾಶ ಕೊಡುವುದು ವಿದ್ಯಾಭ್ಯಾಸದ ಪ್ರಗತಿಯ ದೃಷ್ಟಿಯಿಂದ ಬಹಳ ಹಾನಿಕರವಾದದ್ದು. ಇದನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡೇ ಈಗ ವಿದ್ಯಾಭ್ಯಾಸದ ಸುಧಾರಣೆಯನ್ನೂ ನಾವು ತಂದಿದ್ದೇವೆ. ಇಂಥ ಅತೃಪ್ತಿ, ಅಶಾಂತಿ, ಅಶಿಸ್ತುಗಳು ಈ ಸುಧಾರಣೆಗಳಿಂದ ಹೋಗುತ್ತವೆಂದು ನಾನು ಭಾವಿಸುತ್ತೇನೆ. ಆದರೆ ಅದು ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತದೆಂಬುದನ್ನು ಇನ್ನೂ ಕಾದುನೋಡಬೇಕು. ಆದ್ದರಿಂದ ಸದ್ಯಕ್ಕೆ ನಾನು ಹೇಳಿದ ಸಲಹೆಗಳನ್ನು ಆದಷ್ಟು ಮಟ್ಟಿಗೆ ಗಮನಿಸಬೇಕೆಂದು ಹೇಳಿ ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved :

"That the demand be reduced by Rs. 100."

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಅಧ್ಯಕ್ಷರೇ, ಶ್ರೀಯುತ ಅನಂತರಾಮಯ್ಯರವರು ಸಭೆಯ ಮುಂದೆ ಇಟ್ಟಿರತಕ್ಕ ಖೋತಾ ನಿರ್ಣಯವನ್ನು ಸಮರ್ಥಿಸುತ್ತಾ, ನಾನು ವಿದ್ಯಾಭ್ಯಾಸದ ಇಲಾಖೆಯ ಕಾರ್ಯದ ಬಗ್ಗೆ ಒಂದೆರಡು ಮಾತುಗಳನ್ನಾಡಬೇಕೆಂದು ಬಯಸುತ್ತೇನೆ.

ನಮ್ಮ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ಬಗ್ಗೆ ಹಾಗೂ ವಿದ್ಯಾಭ್ಯಾಸದ ಸುಧಾರಣೆಯ ಬಗ್ಗೆ, ಈಗಾಗಲೇ ಒಂದು ಸಮಿತಿ ರಚನೆಯಾಗಿ ಆ ಸಮಿತಿ ಅನೇಕ ಸಮಸ್ಯೆಗಳನ್ನು ಕೂಲಂಕಷವಾಗಿ ವಿಚಾರ ಮಾಡಿ ಒಂದು ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದೆ. ಬಹುಶಃ ಆ ವರದಿ ಸಭೆಯ ಮುಂದೆ ಬಂದಾಗ ಈ ಅನೇಕ ವಿಷಯಗಳಿಗೆ ಸೂಕ್ತ ಪರಿಹಾರಗಳೂ ಅಲ್ಲಿ ಸಲಹೆ ಮಾಡಲ್ಪಟ್ಟಿವೆಯೆಂದು ಗೊತ್ತಾಗುತ್ತದೆ. ನಾನೂ ಅಲ್ಲಿ ಒಬ್ಬ ಸದಸ್ಯನಾಗಿದ್ದುದರಿಂದ ಅದನ್ನು ಹೇಳಬಹುದಾಗಿದೆ.

ಆದರೆ ಮುಖ್ಯವಾಗಿ ದೇಶದ ಆರ್ಥಿಕ ದೃಷ್ಟಿಯಿಂದ ನೋಡುವುದಾದರೆ, ಆ ಸಲಹೆಗಳು ಎಷ್ಟರಮಟ್ಟಿಗೆ ಕಾರ್ಯಗತವಾಗಲು ಸಾಧ್ಯವೆಂಬುದೇ ಒಂದು ದೊಡ್ಡ ಅನುಮಾನ. ನಿಜವಾಗಿಯೂ ಆ ಸಲಹೆಗಳನ್ನು ಈ ವರ್ಷದ ಪ್ರಾರಂಭದಲ್ಲೇ ಕಾರ್ಯಗತ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು.

ಒಬ್ಬ ಸದಸ್ಯರು.—Relevant ಆಗಿರುವುದನ್ನು ಮಾತ್ರ ಹೇಳಿ.

ಶ್ರೀ ಎಸ್. ಗೋಪಾಲಗೌಡ.—Relevant ಆಗಿರುವುದಕ್ಕೇ ನಾನು ಹೇಳುತ್ತಿರುವುದು. ಈ ಇಲಾಖೆ ಯಾವ ರೀತಿಯಲ್ಲೂ satisfactory ಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಆ ಅತೃಪ್ತಿಗೆ ಸಂಬಳ ಸಾರಿಗೆಗಳು ಕಡಿಮೆಯಿರುವುದೂ ಮತ್ತು ಅಲ್ಲಿ ಹಳೆಯ ಪದ್ಧತಿಗಳನ್ನು ಮುಂದುವರಿಸಿಕೊಂಡು ಬಂದಿರುವುದೂ ಕಾರಣವೆಂದು ಹೇಳಿದ್ದಾರೆ. ಇದನ್ನು ಮೂಲಭೂತವಾಗಿ ಬದಲಾವಣೆ ಮಾಡಬೇಕು ; ವಿದ್ಯಾಭ್ಯಾಸದ ಇಲಾಖೆಯ ರಚನೆಯಾಗಲಿ ಮತ್ತು ವಿದ್ಯಾಭ್ಯಾಸವನ್ನು ಕೊಡುವ ರೀತಿಯಾಗಲಿ ತೃಪ್ತಿಕರವಾಗಿಲ್ಲವೆಂದು ಹೇಳಿ ಅದನ್ನು ಬದಲಾಯಿಸಬೇಕೆಂಬ ಉದ್ದೇಶದಿಂದಲೇ ಈ ಸಮಿತಿಯನ್ನು ರಚನೆಮಾಡಿ ಸಲಹೆಗಳನ್ನು ಸರ್ಕಾರ ಪಡೆದಿದೆ. ಆದರೆ ಮುಖ್ಯವಾಗಿ ನಾವು ಇವೊತ್ತು ಸರ್ಕಾರದವರ ಮೇಲೆ ಒತ್ತಾಯ ತರಬೇಕಾದದ್ದು, ಸರ್ಕಾರದವರು ಸಾಧ್ಯವಾದಮಟ್ಟಿಗೂ ಈ ಸಾರಿ ಹಣವನ್ನು ಒದಗಿಸಬೇಕೆಂಬುದೇ ಆಗಿದೆ.

ಆಮೇಲೆ, ಈ ಸಂಬಂಧದಲ್ಲಿ ಸೆಂಟ್ರಲ್ ಕಾಲೇಜಿನ ಹಾಸ್ಟಲಿನ ಆಡಳಿತದ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಅಲ್ಲಿನ ವಿಷಯಗಳಲ್ಲಿ ಅನೇಕ ವಿದ್ಯಾರ್ಥಿಗಳು ದೂರುಗಳನ್ನು ತಂದಿದ್ದಾರೆ, ಆ ವಿದ್ಯಾರ್ಥಿನಿಲಯ ಸಮರ್ಪಕವಾಗಿ ನಡೆಯುತ್ತಿಲ್ಲ, ದೂರುಗಳನ್ನು ಅನೇಕ ವೇಳೆ ಹೇಳಿಕೊಂಡರೂ ಅದನ್ನು ಕೇಳುತ್ತಿಲ್ಲ, ತಿಂಗಳಿಗೆ 70-80 ರೂಪಾಯಿಗಳ ಖರ್ಚು ಬೀಳುತ್ತದೆ ಆದರೂ ಅಲ್ಲಿ ಅದನ್ನು ಹೇಳುವುದಕ್ಕಾಗಲಿ, ಅದನ್ನು ವಿರೋಧಿಸುವುದಕ್ಕಾಗಲಿ ಹಕ್ಕಿಲ್ಲದೆ ಹೋಗಿದೆ ; ಸರ್ಕಾರದವರೂ ಮತ್ತು ಸಂಬಂಧಪಟ್ಟ ಅಧಿಕಾರಿಗಳೂ ಇದನ್ನು ಗಮನಿಸಿ ಸರಿಪಡಿಸಬೇಕೆಂದು ವಿದ್ಯಾರ್ಥಿಗಳು ಕೇಳಿಕೊಂಡಿದ್ದಾರೆ. ಇದನ್ನೇ ಸಾಮಾನ್ಯವಾಗಿ ಎಲ್ಲಾ ವಿದ್ಯಾರ್ಥಿನಿಲಯಗಳಿಗೂ ಅನ್ವಯಿಸಿದರೂ ತಪ್ಪಿಲ್ಲವೆನ್ನಬಹುದು. ಎಲ್ಲಕ್ಕೂ ಆ ಮಾತುಗಳು ಸಲ್ಲುತ್ತವೆ. ಎಲ್ಲೇ ಆಗಲಿ ಈ ರೀತಿಯ ಹಣಕಾಸಿನ ತೊಂದರೆ ಇರುವಾಗ ಮತ್ತು ಅನೇಕ ಬಡವರು ಆರ್ಥಿಕ ಮುಗ್ಗಟ್ಟಿನಿಂದ ಓದುತ್ತಿರುವಾಗ ಇಂಥ ದುಬಾರಿ ರೇಟಿನಲ್ಲಿ ವಿದ್ಯಾಭ್ಯಾಸ ಮಾಡುವುದೇ ಕಷ್ಟವಾಗಿರುವಾಗ, ಆಡಳಿತ ನಿರ್ವಹಣೆಯಲ್ಲಿ ಲೋಪದೋಷಗಳಿದ್ದು ಹಣದ ದುರುಪಯೋಗವಾದರೆ ಖರ್ಚು ಹೆಚ್ಚಾಗಿ ಅನೇಕ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನೇ ಬಿಡಬೇಕಾಗಿ ಬರುತ್ತದೆ. ಆದ್ದರಿಂದ ಈ ವಿಷಯವನ್ನು ಸರ್ಕಾರದವರು ಗಮನಿಸಬೇಕು. ಮತ್ತು ಅಂಥಾ ವಿದ್ಯಾರ್ಥಿನಿಲಯಗಳ ಮ್ಯಾನೇಜ್‌ಮೆಂಟ್

(ಶ್ರೀ ಎಸ್. ಗೋಪಾಲಗೌಡ.)

ಮಾಡುವವರಿಗೆ ಸೂಕ್ತ ಸಲಹೆಗಳನ್ನು ಕೊಟ್ಟು ಅಲ್ಲಿ ಯಾವುದೇ ರೀತಿಯಲ್ಲೂ ಲೋಪದೋಷಗಳು ನಡೆಯದಂತೆ ಹೆಚ್ಚಿನ ನಿಗಾ ಇಡಬೇಕೆಂಬ ವಿಷಯವನ್ನು ನಾನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಇನ್ನು ವಿದ್ಯಾಭ್ಯಾಸದ ಇಲಾಖೆಯಲ್ಲಿ ಕೆಲಸ ನಡೆಯುತ್ತಿರುವ ಬಗ್ಗೆ ಅತೃಪ್ತಿಯಿರುವುದು ನಿಜ. ಈಗ ನನ್ನ ಗೆಳೆಯರಾದ ಅನಂತರಾಮುರವರು ಹೇಳಿದ್ದರಲ್ಲೂ ಮತ್ತು ಹಿಂದೆ ಅನೇಕ ಸಲ ಇದರ ಸಂಬಂಧವಾಗಿ ಚರ್ಚೆಯಾಗಿರುವುದರಲ್ಲೂ ಹೀಗೆ ಅನೇಕ ನ್ಯೂನತೆಗಳಿರುವುದು ಹೊರಪಟ್ಟಿದೆ. ಆ ಬಗ್ಗೆ ನನಗೆ ಕಾಲಾವಕಾಶವಿಲ್ಲದಿರುವುದರಿಂದ ವಿವರವಾಗಿ ಮಾತನಾಡಲು ಇಷ್ಟಪಡುವುದಿಲ್ಲ. ಕೊನೆಯದಾಗಿ ನಾನು ಮತ್ತೊಮ್ಮೆ ಸರ್ಕಾರದವರು ಈಗ ಸುಧಾರಣಾ ಸಮಿತಿಯವರು ಕೊಟ್ಟಿರುವ ಸಲಹೆಗಳನ್ನು ಕಾರ್ಯಗತ ಮಾಡುವುದಕ್ಕೆ ಹೆಚ್ಚಿನ ಹಣವನ್ನು ಒದಗಿಸಿ ಆ ಸಲಹೆಗಳನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಒತ್ತಾಯಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

12-30 P.M.

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ, ಎರಡೇ ಮಾತುಗಳನ್ನು ಹೇಳಿ ಮುಗಿಸುತ್ತೇನೆ. ಈಗಿನ ವಿದ್ಯಾಭ್ಯಾಸಕ್ರಮದಲ್ಲಿ ಲೋಪಗಳನ್ನು ಕಂಡೇ ಇದನ್ನು ನಿವಾರಣೆ ಮಾಡುವುದಕ್ಕಾಗಿ ಈ ಸಮಿತಿಯನ್ನು ರಚನೆ ಮಾಡಿದೆವು. ಈಗ ಅದರ ವರದಿ ಬಂದಿದೆ. ಅವನ್ನು ಅನುಸರಿಸುವುದರಿಂದ ಈ ನ್ಯೂನತೆಗಳೆಲ್ಲಾ ಬಹುಭಾಗ ಪರಿಹಾರವಾಗುತ್ತವೆ.

ಆದರೆ ಮುಖ್ಯವಾಗಿ ಅಶಿಸ್ತಿನ ವಿಷಯವಾಗಿ ನಮ್ಮ ಮಾನ್ಯ ಮಿತ್ರರು ಹೇಳಿದರು. ಶಿಸ್ತು ಅಲ್ಲಿರಬೇಕಾದದ್ದು ಬಹಳ ಅಗತ್ಯ. ಅದರ ಜೊತೆಗೆ, ಇದಕ್ಕೆ ಸಹಕರಿಸುವಂತಿರಬೇಕಾದರೆ ಸಾರ್ವಜನಿಕರಲ್ಲೂ ಆ ಭಾವನೆ ಬೆಳೆಯಬೇಕು. ವಿದ್ಯಾಭ್ಯಾಸದ ಇಲಾಖೆಯಲ್ಲಿ ಪ್ರಿನ್ಸಿಪಾಲರಿರುತ್ತಾರೆ, ವೈಸ್ ಚಾನ್ಸಲರ್ ಇರುತ್ತಾರೆ. ಅವರನ್ನು ನೋಡಬೇಕಾದರೆ ಹೇಗೆ ಹೋಗಬೇಕು, ಯಾವ ರೀತಿ, ಯಾವ ಕಾಲದಲ್ಲಿ ಪ್ರವೇಶ ಮಾಡಬೇಕು ಎಂಬುದನ್ನೆಲ್ಲಾ ನೋಡಿಕೊಂಡು ಮಾಡಬೇಕು, ಪರೀಕ್ಷೆಯ ಕಾಲವೇ ಮುಂತಾಗಿ ಅನೇಕ ಅನಾನುಕೂಲ ಸಂದರ್ಭಗಳಿರುತ್ತವೆ. ಆದ್ದರಿಂದ ಕಾಲ ಗೊತ್ತಿಲ್ಲದೆ ಅವರನ್ನು ನೋಡುವುದಕ್ಕೆ ಹೋಗುವುದು ಸರಿಯಲ್ಲ. ಮಾನ್ಯ ಸದಸ್ಯರೂ, ಮಂತ್ರಿಗಳೂ ಅವರನ್ನು ಸರಿಯಾಗಿ ಸ್ವಾಗತಿಸುವುದಾಗಿಯೂ, D.P.I. ಸರಿಯಾಗಿ ಸ್ವಾಗತಿಸಲಿಲ್ಲವಾಗಿಯೂ ಹೇಳಿದರು. ನಾನೇ ಇದನ್ನು ವಿಚಾರ ಮಾಡಿದ್ದೇನೆ. ಅವರು ತಪ್ಪು ತಿಳಿದುಕೊಳ್ಳದಿದ್ದರೆ ಒಂದು ಮಾತು ಹೇಳುತ್ತೇನೆ. ಯಾವುದೋ ಒಂದು ವಿಚಾರದಲ್ಲಿ ಏನೂ ತತ್ವವಿಲ್ಲದೆ ಇದ್ದರೂ ನನ್ನ ಹತ್ತಿರವೇ 5 ಗಂಟೆ ಕಾಲ ಕಳೆದರು. ಅವರ ಹತ್ತಿರ 10 ಗಂಟೆ ಕಾಲ ಕಳೆದರಂತೆ. ಯಾರಿಗೆ ತಾನೆ ಹೀಗೆ ಮಾಡಿದರೆ ಬೇಜಾರಾಗುವುದಿಲ್ಲ? ಆದ್ದರಿಂದ ಈ ವಿಚಾರದಲ್ಲಿ ನಾನು ಹೆಚ್ಚು ಹೇಳುವುದು ಅನಾವಶ್ಯಕ.

ಕೊನೆಯದಾಗಿ, ಈಗ ಏನು ಲೋಪದೋಷಗಳನ್ನು ಅವರು ಹೇಳಿದ್ದಾರೋ ಅದನ್ನು ಎಲ್ಲರೂ ಮನಗಂಡಿದ್ದಾರೆ. ಅವುಗಳನ್ನು ನಿವಾರಣೆ ಮಾಡಬೇಕೆಂದೇ ಎಲ್ಲರೂ ಹೇಳಿರುವುದರಿಂದ ಮತ್ತು ಅದಕ್ಕೇ ಈ ಸರ್ಕಾರ ಮತ್ತು ಈ ಸಭೆ ಪ್ರಯತ್ನ ಪಡುತ್ತಿರುವುದರಿಂದ, ಈಗ ತಂದಿರತಕ್ಕ ಖೋತಾ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

The cut motion was, by leave, withdrawn.

Mr. SPEAKER.—The question is :

"That a sum not exceeding Rs. 3,57,46,000 be granted to the Government to defray the charges which will come in course of payment during the year ending 31st day of March 1954, in respect of 'Education'."

The motion was adopted.

Mr. SPEAKER.—Now, the discussion on a matter of public importance arising out of answers to question No. 144, may be taken up.

Sri N. C. NAGIAH REDDY (Goribidnur).—Sir, please permit to have the discussion on some other day.

Mr. SPEAKER.—May we have it on the 27th ?

Sri A. G. RAMACHANDRA RAO.—We are having the Budget now. After the 1st, it will be better.

Mr. SPEAKER.—We will have it on the 3rd April (Friday).

The House will now rise for the day to meet again to-morrow at twelve of the Clock.

The House adjourned at thirty-five minutes past Twelve of the Clock to meet again at Twelve of the Clock on Tuesday the 24th March 1953.

WD 4516—GPB—500—28-12-53